ಐಕ್ಯರಂಗ

ವಾರಪತ್ರಿಕೆ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 9 | ಸಂಚಿಕೆ 1 | ಜನವರಿ 4, 1987 | ಬೆಲೆ 1 ರೂ.

ಮುಖ್ಯ ಚುನಾವಣಾಧಿಕಾರಿಗಳಿಗೆ ಸಿ. ಪಿ. ಐ. (ಎಂ) ದೂರು

ರಾಜ್ಯ ಕಾರ್ಯದರ್ಶಿ ಮಂಡಳಿ ದಸ್ಯರಾದ ಎಂ. ಎಸ್. ಸೂರ್ಯನಾರಾಯಣರಾವ್‌ರವರು ನೀಡಿದ ಪತ್ರಿಕಾ ಹೇಳಿಕೆ.

ಕರ್ನಾಟಕದ ಮುಖ್ಯಮಂತ್ರಿಗಳೂ ಸೇರಿದಂತೆ ಜನತಾ ಪಕ್ಷದ ನಾಯಕರು ರಾಜ್ಯಾದ್ಯಂತ ಜಿಲ್ಲಾ ಪರಿಷತ್‌ಗಳಿಂದ ಎಲ್ಲಾ ಸಮಸ್ಯೆಗಳೂ ಬಗೆಹರಿಯುತ್ತವೆಂಬ ರೀತಿಯಲ್ಲಿ ಭ್ರಮೆಯನ್ನು ಬಿತ್ತುತ್ತಿದ್ದಾರೆ. ಈ ವ್ಯವಸ್ಥೆಯಿಂದ ಪೂರ್ಣವಾಗಿ ವಿಕೇಂದ್ರೀಕರಣ ಆಗುತ್ತದೆಯೆಂದು ಹೇಳುತ್ತಿದ್ದಾರೆ.

ಜನತಾ ಪಕ್ಷ ಸಿ.ಪಿ.ಐ [ಎಂ] ಸ್ಪರ್ಧಿಸಿರುವ ಅನೇಕ ಕಡೆಗಳಲ್ಲಿ ಬೆದರಿಕೆ ಹಾಕುತ್ತಿವೆ ಮೋಟಾ ಮತಚಲಾವಣೆ, ರಿಗ್ಗಿಂಗ್‌ಗಳಿಗೆ ಕೈ ಹಾಕುವ ಸಂಭವವಿದೆ. ಈ ಬಗ್ಗೆ ಪಕ್ಷದ ರಾಜ್ಯ ಕಛೇರಿಗೆ ಅನೇಕ ದೂರುಗಳು ಬಂದಿವೆ ಚಿಂತಾಮಣಿಯಿಂದ ತಂತಿಯೊಂದು ಬಂದಿದ್ದು, ಜನತಾ ಸರ್ಕಾರದ ಮಂತ್ರಿಯಾಗಿರುವ ಕೆ. ಕೃಷ್ಣಾರೆಡ್ಡಿಯವರು ಚಿಂತಾಮಣಿಯ 3 ಜಿಲ್ಲಾ ಪರಿಷತ್ ಕ್ಷೇತ್ರಗಳಲ್ಲಿ ರಿಗ್ಗಿಂಗ್ ನಡೆಸುತ್ತೇವೆಂದು ಬಹಿರಂಗವಾಗಿ ಹೇಳುತ್ತಿದ್ದಾರೆಂದು ದೂರಿದೆ.

ಅಲ್ಲದೆ ಹೊಸಕೋಟೆ ಅನುಗೊಂಡನಹಳ್ಳಿ ಮೀಸಲು ಕ್ಷೇತ್ರದ ಮುತ್ತೂರಿನಲ್ಲಿ ಜನತಾ ಪಕ್ಷದ ಸ್ಥಳೀಯ ಮುಖಂಡ ಮತಗಟ್ಟೆಗಳ ಮುಂದೆ ಬೆದರಿಕೆ ಒಡ್ಡುತ್ತಾನೆಂದು ವರದಿಗಳು ಬಂದಿವೆ.

ಈ ರೀತಿಯ ರಿಗ್ಗಿಂಗ್ ಬೆದರಿಕೆಗಳ ವಿರುದ್ಧ ಚುನಾವಣಾಧಿಕಾರಿಗಳು ಕ್ರಮ ಕೈ ಗೊಳ್ಳಬೇಕೆಂದು ಈ ಕ್ಷೇತ್ರಗಳಿಗೆ ವೀಕ್ಷಕರನ್ನು ಕಳುಹಿಸಬೇಕೆಂದು ಮುಖ್ಯ ಚುನಾವಣಾಧಿಕಾರಿಗಳನ್ನು ಕೋರಿದ್ದಾರೆ. ಜನತಾ ಪಕ್ಷದ ಆಶ್ವಾಸನೆಗಳ ಭ್ರಮೆಗೆ ಬಲಿಯಾಗದೆ, ಬೆದರಿಕೆಗಳಿಗೆ ಮಣಿಯದೆ ಸಿ.ಪಿ.ಐ. (ಎಂ) ಗೆ ಮತ ನೀಡಬೇಕೆಂದು ವಿನಂತಿಸಿದ್ದಾರೆ ಮತದಾರರನ್ನು ●

ಜನತಾ ಪಕ್ಷದಿಂದ ಸುಳ್ಳು ಪ್ರಚಾರ

ಜಿಲ್ಲಾ ಪರಿಷತ್ ಚುನಾವಣೆಯಲ್ಲಿ ಗೆಲ್ಲುವ ಸಲುವಾಗಿ ಬಳ್ಳಾರಿ ಜಿಲ್ಲೆಯಲ್ಲಿ ಜನತಾ ಪಕ್ಷ ಸುಳ್ಳು ಪ್ರಚಾರ, ಗೂಂಡಾಗಿರಿ, ಅಧಿಕಾರದ-ಹಣದ ದುರುಪಯೋಗ ಮಾಡುತ್ತಿದೆಂದು ಸಿ. ಪಿ. ಐ. (ಎಂ) ಸೆಕ್ರೆಟಾರಿಯೇಟ್ ಸದಸ್ಯ ಎನ್. ಕೆ. ಉಪಾಧ್ಯಾಯರು ಹೊಸಪೇಟೆಯಿಂದ ಹೊರಡಿಸಿದ ಪತ್ರಿಕಾ ಹೇಳಿಕೆಯಲ್ಲಿ ಆಪಾದಿಸಿದ್ದಾರೆ. ಅರಸೀಕೆರೆ ಮತಕ್ಷೇತ್ರದಲ್ಲಿ ಸಿ. ಪಿ. ಐ. [ಎಂ] ಪರವಾಗಿ ಬಿ. ಪರಶುರಾಮಪ್ಪ ಸ್ಪರ್ಧಿಸುತ್ತಿದ್ದು ಜನತಾಪಕ್ಷದವರು ತಮ್ಮ ಬ್ಯಾಲಟ್ ಪೇಪರಿನಲ್ಲಿ ಕುಡುಗೋಲು ಸುತ್ತಿಗೆ, ನಕ್ಷತ್ರದ ಬದಲಾಗಿ, ಸಿ. ಪಿ. ಐ ಚುನಾವಣಾ ಚಿಹ್ನೆಯಾದ ಕುಡುಗೋಲು, ಗೋಧಿ ತೆನೆಯ ಚಿತ್ರ ಛಾಪಿಸಿ ಸಿ. ಪಿ. ಐ. [ಎಂ] ಸ್ಪರ್ಧೆಯಲ್ಲಿಲ್ಲೆಂದು ಪ್ರಚಾರ ಮಾಡುತ್ತಿದ್ದಾರೆ. ಅದರ ಕುರಿತು ಈಗಾಗಲೇ ಹರಪನಹಳ್ಳಿ ಚುನಾವಣಾಧಿಕಾರಿಗಳಿಗೆ ಲಿಖಿತ ಆಕ್ಷೇಪ ಸಲ್ಲಿಸಲಾಗಿದೆ ಈ ರೀತಿಯ ಪ್ರಚಾರ ಮತದಾರರಲ್ಲಿ ಗೊಂದಲ ಉಂಟುಮಾಡುತ್ತಿದೆ. ಅರಸೀಕೆರೆಯಲ್ಲಿ ಭಾಷಣ ಮಾಡುತ್ತಿದ್ದಾಗ ಜನತಾ ಪಕ್ಷದವರು ಕಲ್ಲು ತೂರಿದ ಪರಿಣಾಮವಾಗಿ ಇಬ್ಬರಿಗೆ ತಲೆಗೆ ಗಾಯವಾಗಿದೆ.

ಹಲವಾಗಲು ಕ್ಷೇತ್ರದಲ್ಲಿ ಸಿ. ಪಿ. ಐ (ಎಂ) ಬೆಂಬಲಿತ ಅಭ್ಯರ್ಥಿ ದುರ್ಗಪ್ಪ ಸ್ಪರ್ಧಿಸುತ್ತಿದ್ದು, ಆ ಕ್ಷೇತ್ರದ ಹರಖಂಡ ಗ್ರಾಮದಲ್ಲಿ ಸಿ. ಪಿ. ಐ. [ಎಂ] ಬೆಂಬಲಿಗರನ್ನು ಉರುಲು ಹಾಕಿ ಕೊಲ್ಲುವ ಪ್ರಯತ್ನ ನಡೆಯಿತು. ಜಿಗಳೂರಿನಲ್ಲಿ ಸರ್ಕಲ್ ಇನ್ಸ್‌ಪೆಕ್ಟರಾಗಿರುವ ಎಂ. ಪಿ. ನಾಯ್ಕ ಎಂಬವರು ಈ ಕ್ಷೇತ್ರದಲ್ಲಿ ಜನತಾ ಅಭ್ಯರ್ಥಿ ಪರವಾಗಿ ಪ್ರಚಾರ ಮಾಡುತ್ತಿದ್ದಾರೆಂದು ಕಾ. ಉಪಾಧ್ಯಾಯರು ಆರೋಪಿಸಿ ಇವುಗಳ ಕುರಿತು ಮೇಲಧಿಕಾರಿಗಳು ಯೋಗ್ಯ ಕ್ರಮ ಕೈ ಗೊಳ್ಳಬೇಕೆಂದು ಕೇಳಿಕೊಂಡಿದ್ದಾರೆ. ○

"ಶಾಶ್ವತ ನಮ್ಮ ಸೋದರ ಭಾವನೆ"

"ದೆಹಲಿಯಲ್ಲಿ ದಾರ್ಮಿಕ ಸಮರಸ ಭಾವನೆಗಾಗಿ ಜಾಥಾ"

ಡಿಸೆಂಬರ್ 18 ರಂದು ದೇಶದ ರಾಜಧಾನಿ ದಿಲ್ಲಿ ಒಂದು ಅಪೂರ್ವ ಘಟನೆಯನ್ನು ಕಂಡಿತು. ದಿಲ್ಲಿಯ ಒಂದು ಪತ್ರಿಕಾ ಉಗ್ಗಡಿಸಿದಂತೆ "ವಿವೇಕ ಶಾಲೀ ಜನತೆಯ ಮೌನ ಸ್ಫೋಟಗೊಂಡಿತು" ಅಂದು ಬೆಳಿಗ್ಗೆಯಿಂದಲೇ ಡಿಸೆಂಬರ್‌ನ ಕೊರೆಯುವ ಚಳಿಯನ್ನು ಲೆಕ್ಕಿಸದೆ ಸಾವಿರಾರು ಜನ ಶಾಲಾ ಮಕ್ಕಳು, ಶಾಲಾ ವಿದ್ಯಾರ್ಥಿಗಳು ಅಧ್ಯಾಪಕರು, ಕಲಾವಿದರು, ವಕೀಲರು, ಕಾರ್ಮಿಕರು, ನೌಕರರು ರಾಮಲೀಲಾ ಮೈದಾನದಲ್ಲಿ ಬಂದು ಸೇರ ತೊಡಗಿದರು ಎಲ್ಲೆಲ್ಲೂ ಹಬ್ಬದ ವಾತಾವರಣ. ಸಮವಸ್ತ್ರದ ಶಾಲಾ ಮಕ್ಕಳು. ಬಿಳಿ ನೀಲಿ ಬಣ್ಣದ ಸೋದರ ಭಾವನೆ ಸೂಸುವ ಹೆಣೆದ ಕೈಗಳ ಭಾವುಟಗಳು.

ಜನ, ಧರ್ಮ, ಭಾಷೆಯ ಭೇದ-ಭಾವಗಳನ್ನು ದೂರ ತಳ್ಳಿ ಹೆಗಲಿಗೆ ಹೆಗಲು ಕೊಟ್ಟು ರಾಷ್ಟ್ರೀಯ ಐಕ್ಯತೆಯ ಪಕ್ಷವರ್ತಿಗಳಾಗಿ ಶಾಂತಿ ಯಾತ್ರೆಯಲ್ಲಿ ಅಮಿತೋತ್ಸಾಹದಿಂದ, ಶಿಸ್ತಿನಿಂದ ಭಾಗವಹಿಸಿದರು. "ಹಮ್ ಸಬ್ ಕಾ ಸೈ ಏಕ್ ಹೀ ನಾರಾ ಬನಾ ರಹೇಗಾ ಭಾಯಿಚಾರ" "ಧರ್ಮವನ್ನ ರಾಜಕೀಯದಿಂದ ಪ್ರತ್ಯೇಕಿಸಿ." [illegible] ಕೋತ್ಪಾದಕತೆಗೆ ಮದ್ದೇನು?

([illegible]ನೇ ಪುಟ ನೋಡಿ)

ನಾವು ಸಾಗುತ್ತಿರುವುದೆಲ್ಲಿಗೆ ?

ಸರೋಜಿನಿ ಮಹಿಷಿಯವರ ಸಮಿತಿ ತನ್ನ ವರದಿಯನ್ನು ಮುಖ್ಯಮಂತ್ರಿಗಳಿಗೆ ಸಲ್ಲಿಸಿದೆ. ಈಗಾಗಲೇ 84ರ ಜುಲೈನಲ್ಲಿಯೇ ಒಂದು ಮಧ್ಯಂತರ ವರದಿಯನ್ನು ಈ ಸಮಿತಿ ಸಲ್ಲಿಸಿತೆಂಬುದನ್ನು ಈಗ ನೆನಪಿಸಿಕೊಳ್ಳಬಹುದು. ಜನರ ಕನಿಷ್ಠ ಅವಶ್ಯಗಳನ್ನು ಪೂರೈಸಲು ತನ್ನ ಎಲ್ಲಾ ಪ್ರಯತ್ನ ಮಾಡಿ ಜನರ ಧೃಢ ಬೆಂಬಲವನ್ನು ಗಳಿಸಿಕೊಳ್ಳಲಾರದ ಪಕ್ಷವೊಂದು, ಜನರ ಹಿತಗಳನ್ನು, ಅಗತ್ಯಗಳನ್ನು ಪೂರೈಸಿದರೆ ತನ್ನ ಹಿತಗಳಿಗೆ ಧಕ್ಕೆ ಬರುತ್ತದೆಯೆಂದು ಭಾವಿಸುವ ಬರಿ ಬಾಯುಂಚಿನ ಆಶ್ವಾಸನೆಗಳನ್ನು ನೀಡುವ, ಭ್ರಮೆಯನ್ನು ಬಿತ್ತುವ ಪಕ್ಷವೊಂದು, ತನ್ನ ವರ್ಗಹಿತಗಳನ್ನು ರಕ್ಷಿಸಿಕೊಳ್ಳ ಬಯಸುವ, ಜನ ಸಮುದಾಯದ ದುಡಿಮೆಯ ಫಲವನ್ನು ಉಳ್ಳವರ ವರ್ಗಕ್ಕೆ ಹಂಚ ಬಯಸುವ ಭೂಮಾಲೀಕ ಬಂಡವಾಳಶಾಹಿ ಪಕ್ಷವೊಂದು ಮಾತ್ರ ಇಂತಹ ವರದಿಯನ್ನು ಹುಟ್ಟಿಹಾಕಲು ಸಾಧ್ಯ. ಇಂತಹ ವರದಿಯ ಬಗ್ಗೆ ಯೋಚಿಸಲು ಸಾಧ್ಯ. ಅಂದು ರಾಜಕುಮಾರ್ ಅಭಿಮಾನಿಗಳ ಸಂಘದ ಭಾಷಾಂಧ ಚಳುವಳಿಯನ್ನು ಪ್ರಜಾಸತ್ತಾತ್ಮಕವಾಗಿ ಎದುರಿಸಲು ರಾಷ್ಟ್ರೀಯ ದೃಷ್ಟಿಕೋನದ ಬಗ್ಗೆ, ಭಾರತೀಯರೆಲ್ಲರ ಐಕ್ಯತೆಯ ಬಗ್ಗೆ, ಸಮಾನತೆಯ ಬಗ್ಗೆ ಕನ್ನಡಿಗರೆಲ್ಲರಿಗೆ ತಿಳಿ ಹೇಳುವ ರಾಷ್ಟ್ರೀಯ ಕರ್ತವ್ಯವನ್ನು ಪಾಲನೆ ಮಾಡದ ರಾಷ್ಟ್ರೀಯ ಪಕ್ಷವೊಂದು ಮಾತ್ರ. ಭಾಷಾಂಧತೆಯನ್ನು, ಕನ್ನಡದ ಸಾಮಾಜಿಕ ಸಂದರ್ಭದಿಂದ ಪೂರ್ಣವಾಗಿ ತೊಡೆಯಲು ಪ್ರಯತ್ನ ಮಾಡದೆ ಭಾಷಾಂಧತೆಗೆ ಪ್ರಚೋದನೆ ನೀಡಿ, ಆ ಚಳುವಳಿಯ ಹಿಂದಿರುವ ಜನತೆಯನ್ನು ತನ್ನ ಕಕ್ಷೆಯೊಳಗೆ ತೆಗೆದುಕೊಳ್ಳ ಬಯಸುವ ಪಕ್ಷವೊಂದು ಮಾತ್ರ ಇಂತಹ ವರದಿಯನ್ನು ಹುಟ್ಟಿ ಹಾಕಲು ಸಾಧ್ಯ.

ಎಲ್ಲಾ ರಾಜ್ಯಗಳೂ ಈ ತತ್ವವನ್ನು ಅನುಸರಿಸಿದರೆ ಭಾರತ ಒಕ್ಕೂಟ ಒಂದೇ ದೇಶ, ಒಂದೇ ಆಡಳಿತವಾಗಿ ಉಳಿಯುವುದಿಲ್ಲ. ಬೇರೆ ಬೇರೆ ಪ್ರದೇಶಗಳಲ್ಲಿ ಬೇರೆ ಬೇರೆಯಾಗಿ ಜೀವಿಸುವ ಪ್ರತ್ಯೇಕ ದೇಶಗಳಾಗಿ ಪರಿಣಮಿಸುತ್ತದೆ.

ತಾನು ಅಧಿಕಾರದಲ್ಲಿ ಉಳಿದುಕೊಳ್ಳುವ ಸಲುವಾಗಿ ವೆಂಕಟಸ್ವಾಮಿ ಆಯೋಗದ, ಮೀಸಲಾತಿಯ ಗೊಂದಲವನ್ನು ಸೃಷ್ಟಿಸಿದ ಪಕ್ಷ. 'ಮನೆಗೊಂದು ಉದ್ಯೋಗ ನೀಡುತ್ತೇವೆಂಬ ಸಾಬೂನಿನ ಗುಳ್ಳೆಯನ್ನು ಸೃಷ್ಟಿಸಿದ ಪಕ್ಷ, ಉದ್ಯೋಗಗಳನ್ನು ಸೃಷ್ಟಿಸಲಾರದ, ಕೇಂದ್ರದೊಡನೆ ಅದಕ್ಕಾಗಿ ಜನಸಮುದಾಯವನ್ನು ಒಳಗೊಂಡು, ಅವರನ್ನು ಎಚ್ಚರಿಸಿ ಹೋರಾಟ ಮಾಡಲಾರದ ಬಂಡವಾಳಶಾಹಿ ಪಕ್ಷ, ಕೆಲವೇ ಕೈಯಲ್ಲಿ ಕೇಂದ್ರಿಕೃತವಾದ ಭೂಮಿಯನ್ನು, ಸರಕಾರಿ ಬಂಜರು ಭೂಮಿಯನ್ನು ಹಂಚಿ ಗ್ರಾಮೀಣ ನಿರುದ್ಯೋಗಕ್ಕೆ ಮದ್ದು ಹುಡುಕಲಾರದ ಭೂಮಾಲಿಕ ಪಕ್ಷ. ಈಗ ಜಿಲ್ಲಾ ಪರಿಷತ್ ಚುನಾವಣೆಗೆ ಎರಡು ದಿನಗಳು ಉಳಿದಿರುವಾಗ, ಲಕ್ಷಾಂತರ ಗ್ರಾಮೀಣ ವಿದ್ಯಾವಂತ ನಿರುದ್ಯೋಗಿಗಳ ಮನಸ್ಸಿನಲ್ಲಿ ಬುರುಗು ಗನಸುಗಳನ್ನು ಬಿತ್ತಿ ಅವರ ಮತಗಳ್ಳಲು ಮಾಡಿದ ಹೂಟ ಈ ಸರೋಜಿನಿ ಮಹಿಷಿ ವರದಿಯ ಶಿಫಾರಸುಗಳು.

ಈ ಶಿಫಾರಸುಗಳ ಹಿಂದಿನ ಅವತರಣಿಕೆಯ ಬಗ್ಗೆ ನಮ್ಮ ಕೇಂದ್ರ ಮುಖವಾಣಿಯ ನಿನಾದವನ್ನಿನ್ನು ಕೇಳಿ:

ಈ ಶಿಫಾರಸುಗಳ ಹೊರಗಣ ಎರಡು ಅಪಾಯಕಾರಿಯಾದ ಬೇಡಿಕೆಗಳನ್ನು ಮುಂದಿಟ್ಟದೆ–ಒಂದು ಕರ್ನಾಟಕದಲ್ಲಿರುವ

(8ನೇ ಪುಟ ನೋಡಿ)

ಒಳಗಿನ ಪುಟಗಳಲ್ಲಿ

ಪ್ರಧಾನಮಂತ್ರಿಗಳಿಗೆ ಜ್ಯೋತಿಬಸು ಮಾರುತ್ತರ

ಪ್ರಧಾನ ಮಂತ್ರಿ ರಾಜೀವ ಗಾಂಧಿ ಸೆಪ್ಟೆಂಬರ್ 18ರಂದು ಕಲ್ಕತ್ತಾದಲ್ಲಿ ಘೋಷಿಸಿದ 684 ಕೋಟಿರೂ. ಬಗ್ಗೆ ವಿವರಗಳನ್ನು ಕೇಳಿದ್ದರು. ಮುಖ್ಯ ಮಂತ್ರಿ ಜ್ಯೋತಿಬಸುರವರು. ಆ ವಿವರಗಳನ್ನು ನೀಡಿ ಪ್ರಧಾನ ಮಂತ್ರಿಗಳು ಬರೆದ ಅಕ್ಟೋಬರ್ 31 ರ ಪತ್ರಿಕ್ಕೆ ಕಾ|| ಜ್ಯೋತಿ ಬಸು ಬರೆದ ಮಾರುತ್ತರ ಪ. ಬಂಗಾಳಕ್ಕೆ ಕೇಂದ್ರ ಸಹಾಯದ ಬಗ್ಗೆ ಕೇಂದ್ರ ಸರ್ಕಾರ ಮತ್ತು ಕಾಂಗ್ರೆಸ್ (ಐ) ನ ಸುಳ್ಳಿನ ಸರಮಾಲೆಯನ್ನು ಬಯಲಿಗೆಳೆದಿದೆ ಈ ಪತ್ರದ ಸಾರಾಂಶ :-

ಈ 684 ಕೋಟಿರೂ. ನಲ್ಲಿ 210 ಕೋಟಿ ರೂ. ದಕ್ಷಿಣ ವಿದ್ಯುಜ್ಜನಕ ಕೇಂದ್ರದ ವೆಚ್ಚದ ಬಾಬ್ತು ಸೇರಿದೆ. ಆದರೆ ಇದು ಒಪ್ಪಿಗೆಗೆಮಾತ್ರ ಕೇಂದ್ರ ಸರ್ಕಾರ ಮುಂದಿಡಲ್ಪಟ್ಟಿತ್ತು. ಇದರಲ್ಲಿ ಕೇಂದ್ರದ ಸಹಾಯದ ಪ್ರಶ್ನೆಯೇ ಇಲ್ಲ.

ಇನ್ನೊಂದು 250 ಕೋಟಿ ರೂ. ಸಣಬು ಆಧುನಿಕೀಕರಣ ನಿಧಿ ಮತ್ತು ವಿಶೇಷ ಬೆಳವಣಿಗೆನಿಧಿಗೆ ಎನ್ನಲಾಗಿದೆ. ಸಣಬು ಆಧುನಿಕೀಕರಣಕ್ಕೆ ಸಣಬು ಕೈಗಾರಿಕಾ ಘಟಕಗಳಿಗೆ ಆರ್ಥಿಕ ಸಂಸ್ಥೆಗಳಿಂದ ಹಣ ಒದಗಿಸಲು ಏರ್ಪಾಟಾಗಿದೆ. ಎಲ್ಲೂ ಕೇಂದ್ರ ಸರ್ಕಾರದ ಹಣ ಯಾವ ರೀತಿಯಲ್ಲಿಯೂ ತೊಡಗಿಸುತ್ತಿಲ್ಲ. ವಿಶೇಷ ಬೆಳವಣಿಗೆ ನಿಧಿಯ ಬಗ್ಗೆ ಯಾವುದೇ ಮಾಹಿತಿ ಇಲ್ಲ.

ಸಣಬು ಕೈಗಾರಿಕಾ ಉದ್ಯಮಿಗಳಿಗೆ ಕೊಡಲಾಗಿರುವ ಈ ನಿಧಿ ಸಣಬು ಉತ್ಪಾದಕರ ಮೇಲೆ ಮತ್ತು ಕೈಗಾರಿಕಾ ಕಾರ್ಮಿಕರ ಮೇಲೆ ಯಾವ ರೀತಿ ಪರಿಣಾಮ ಬೀರಲಿವೆ ಎಂದು ಕಾದು ನೋಡಬೇಕು. ಆದರೆ ಕಾರ್ಮಿಕರ ಭವಿಷ್ಯ ನಿಧಿಯ 52 ಕೋಟಿ ರೂ. ಗುಳು ಮಾಡಿದ "ಕೀರ್ತಿ" ಹೊಂದಿರುವ ಸಣಬು ಕೈಗಾರಿಕೋದ್ಯಮಿಗಳಿಗೆ ಸಹಾಯಕ್ಕೆ ಬದಲಾಗಿ ಸಣಬು ಕೈಗಾರಿಕೆಯ ರಾಷ್ಟ್ರೀಕರಣ ಮತ್ತು ಸರ್ಕಾರದಿಂದ ಸಣಬಿನ ಸಗಟು ಖರೀದಿ ಮಾಡಬೇಕು ಎನ್ನುವ ಎಡರಂಗ ಸರ್ಕಾರದ ಸಲಹೆಯನ್ನು ಕೇಂದ್ರ ತಿರಸ್ಕರಿಸಿದೆ.

ಎರಡನೇ ಹುಗ್ಲಿ ಸೇತುವೆಗೆ ಎನ್ನಲಾದ 80 ಕೋಟಿ ರೂ. ಸಹ "ಸಹಾಯಧನ" ದ ಭಾಗ ಇದು ಸೇತುವೆ ಮುಗಿಸಲು ಬೇಕಾಗುವ ಹೆಚ್ಚುವರಿ ಹಣವಾದ 100 ಕೋಟಿ ರೂ. ನ ಶೇಕಡಾ 80 ಭಾಗ. ಉಳಿದ 20 ಕೋಟಿ ರೂ ಸಹ ರಾಜ್ಯ ಸರ್ಕಾರಕ್ಕೆ ಸಾಲ ಮಾತ್ರ. ಇದನ್ನು ಬಡ್ಡಿ ಸಮೇತ ಹಿಂದಿರುಗಿಸಬೇಕಾಗುತ್ತದೆ.

ಪ. ಬಂಗಾಳ, ತ್ರಿಪುರಾಗಳ ಜನಪರ ಎಡರಂಗ ಸರ್ಕಾರಗಳ ಮೇಲೆ
ಕೇಂದ್ರದ ವರ್ಗಧಾಳಿ, ಅಪಪ್ರಚಾರಕ್ಕೆ ಕೊನೆಯುಂಟೆ ?
ಕಾ. ಜ್ಯೋತಿಬಸು, ನೃಪೇನ್ ಚಕ್ರವರ್ತಿಯವರ ತಿರುಗುಬಾಣ

ಹೀಗೆ ಕಲ್ಕತ್ತಾದಲ್ಲಿ ಪ್ರಧಾನ ಮಂತ್ರಿ ವಿಜೃಂಭಣೆಯಿಂದ ಘೋಷಿ 684 ಕೋಟಿ ರೂ. ನ ಒಂದು ಸಣ್ಣ ಭಾಗ ಮಾತ್ರ ನಿಜವಾಗಿಯೂ ರಾಜ್ಯ ಸರ್ಕಾರಕ್ಕೆ ಲಭ್ಯವಿರುತ್ತದೆ.

ರಾಜ್ಯದಲ್ಲಿರುವ ಕೇಂದ್ರಿಯ ಸಂಘಟನೆಗಳಿಗೆ 40 27 ಕೋಟಿ ರೂ. ಒದಗಿಸಲಾಗಿದೆ. ಇದನ್ನ ಯಾವ ಸಂಘಟನೆಗಳಿಗೆ ಒದಗಿಸಲಾಗುವುದುವುದು ಎಂದು ಸ್ಪಷ್ಟವಿಲ್ಲ. ಆದರೆ ಇಂತಹ ಬಂಡವಾಳ 1970ರಲ್ಲಿ ಶೇಕಡಾ 11.7 ಇದ್ದದ್ದು 1984ರಲ್ಲಿ ಶೇಕಡಾ 7.5ಕ್ಕೆ ಇಳಿದಿದೆ ಇನ್ನೊಂದು 93 ಕೋಟಿ ರೂ ವಸತಿ ನಿರ್ಮಾಣಕ್ಕೆ ಒದಗಿಸಲಾಗಿದೆ.

ಆದರೆ ರಾಜ್ಯದ ಆರ್ಥಿಕತೆಗೆ ಇವೆಲ್ಲಕ್ಕಿಂತಲೂ ಮಿಗಿಲಾದ ಹಲವು ಮುಖ್ಯ ಅಂಶ ವಿಚಾರಗಳನ್ನು ಕೇಂದ್ರ ಸರ್ಕಾರ ಈಗಾಗಲೇ ತಿರಸ್ಕರಿಸಿದೆ. ಅಥವಾ ನೆನಗುದಿಗೆ ಹಾಕಿದೆ. ಸೆಪ್ಟೆಂಬರ್ 18ರ ಕಲ್ಕತ್ತಾದ ಸಭೆಯಲ್ಲಿ 61 ಅಂಶಗಳಲ್ಲಿ ಬಗ್ಗೆ ನಿರ್ಧಾರ ಮುಂದೆ ಹಾಕಲಾಯಿತು. ಉಳಿದಂತೆ ಸಹ ಯಾವುದೇ ಪ್ರಮುಖ ನಿರ್ಧಾರ ತೆಗೆದುಕೊಳ್ಳಲಿಲ್ಲ ಉದಾಹರಣೆಗೆ ಬಕ್ರೇಶ್ವರ ಮತ್ತು ಸಾಗರದೀಪ್ ವಿದ್ಯುತ್ ಶಕ್ತಿ ಕೇಂದ್ರದ ಬಗ್ಗೆ ಯಾವುದೇ ನಿರ್ಧಾರವಾಗಿಲ್ಲ ಎಂದು ಹೇಳಿದ್ದಾರೆ.

ಕಾ. ಸರೋಜ ಮುಖರ್ಜಿ

ಈ ಸಂದರ್ಭದಲ್ಲೇ ಎಡರಂಗದ ಅಧ್ಯಕ್ಷ ಕಾ|| ಸರೋಜ್ ಮುಖರ್ಜಿ ಪ್ರತ್ಯೇಕ ಹೇಳಿಕೆ ನೀಡಿ ಕೇಂದ್ರ ಸರಕಾರ ಮತ್ತು ಕಾಂಗ್ರೆಸ್ [ಐ] ರೇಡಿಯೋ, ಟಿ.ವಿ. ಪತ್ರಿಕೆಗಳ ಮೂಲಕ ರಾಜ್ಯ ಸರ್ಕಾರಕ್ಕೆ ಕೇಂದ್ರ ಸರ್ಕಾರದ ಸಹಾಯಧನದ ಬಗ್ಗೆ ಪ್ರಜ್ಞಾಪೂರ್ವಕವಾಗಿ ಸುಳ್ಳು ಪ್ರಚಾರ ಮಾಡುತ್ತಿದ್ದಾರೆ ಎಂದು ಉದಾಹರಣೆಗಳ ಸಹಿತ ವಿವರಿಸಿದ್ದಾರೆ. ಇದು ಚುನಾವಣೆಯ ಮುನ್ನ ಕಾಂಗ್ರೆಸ್ [ಐ] ನ ಕ್ಷುಲ್ಲಕ ರಾಜಕೀಯ ಪ್ರಚಾರವೆಂದು ಖಂಡಿಸಿದ್ದಾರೆ. ಬೇಕೆಂತಲೇ ಕೇಂದ್ರದವರು ಅವರದೇ ಸರ್ಕಾರಿ ಉದ್ಯಮಗಳಿಗೆ ಮಾಡುತ್ತಿರುವ ಖರ್ಚು, ಬಂಡವಾಳ ಹೂಡಿಕೆ ಮತ್ತು ರಾಜ್ಯ ಸರ್ಕಾರಕ್ಕೆ ನೀಡುತ್ತಿರುವ ಸಾಲ ಮತ್ತಿತರ ಬಾಬುಗಳನ್ನು ಸೇರಿಸಿ 1000 ಕೋಟಿ ರೂ. ಎಂದು ಉತ್ಪ್ರೇಕ್ಷೆ ಮಾಡಿದ್ದಾರೆ. ರಾಜ್ಯ ಮತ್ತು ದೇಶದ ಜನಯಲ್ಲಿ ತಪ್ಪು ಕಲ್ಪನೆ ಉಂಟು ಮಾಡಲು ಪ್ರಯತ್ನಿಸುತ್ತಿದ್ದಾರೆ. ಈ ಸುಳ್ಳಿನ ಸರಮಾಲೆಯ ನಿಜಮುಖವನ್ನು ತಿಳಿಯಬೇಕಾದದ್ದು ಅತಿ ಅಗತ್ಯ ಎಂದು ಕಾ|| ಮುಖರ್ಜಿ ಕರೆ ನೀಡಿದ್ದಾರೆ.

ತ್ರಿಪುರದಲ್ಲಿ ಭಯೋತ್ಪಾದನೆ ನಿಯಂತ್ರಣಕ್ಕೆ ಕೇಂದ್ರ ಸರ್ಕಾರದ ಅಸಹಕಾರ

ಪಾರ್ಲಿಮೆಂಟಿನಲ್ಲಿ ಕೇಂದ್ರ ಗೃಹ ಮಂತ್ರಿ ಬೂಟಾಸಿಂಗ್, ತ್ರಿಪುರಾದ ಟಿ ಎನ್ ವಿ ಉಗ್ರಗಾಮಿಗಳ ಬಗ್ಗೆ ಎಡರಂಗ ಸರ್ಕಾರ ತೆಗೆದುಕೊಂಡಿರುವ ಕ್ರಮಗಳ ಕುರಿತು ನೀಡಿದ ಹೇಳಿಕೆ ತ್ರಿಪುರಾ ಪರಿಸ್ಥಿತಿ ಬಗ್ಗೆ ಸಂಪೂರ್ಣ ಅಜ್ಞಾನ ಪ್ರದರ್ಶಿಸಿದಂತಾಗಿದೆ.

ಈಶಾನ್ಯ ಭಾರತದಲ್ಲಿರುವ ಅಸ್ಸಾಂ ರೈಫಲ್ಸ್‌ನ 22 ತುಕಡಿಗಳಲ್ಲಿ ಒಂದೇ ಒಂದನ್ನು ಮಾತ್ರ ತ್ರಿಪುರಕ್ಕೆ–ಅದೂ ಪದೇ ಪದೇ ಬೇಡಿಕೆಯ ನಂತರ–ಕೊಟ್ಟಿರುವುದು ಹೇಗೆ ಎಂದು ನಾನು ಕೇಳಬಹುದೆ ? ಕೇಂದ್ರ ಸರ್ಕಾರ ಚಿತ್ತಗಾಂಗ್ ತ್ರಿಪುರಾ ಗಡಿಪ್ರದೇಶದ 200 ಕಿ. ಮೀ. ನಷ್ಟು ಉದ್ದಕ್ಕೂ ಒಂದೇ ಒಂದು ಜೀಪು ಹೋಗ ಬಹುದಾದು ಹೆದ್ದಾರಿ ಏಕೆ ನಿರ್ಮಿಸಿಲ್ಲ ? ತ್ರಿಪುರಾ ಹೆಚ್ಚು ಕಡಿಮೆ ಬಾಂಗ್ಲಾ ದೇಶದಿಂದ ಸುತ್ತುವರಿಯಲ್ಪಟ್ಟಿದ್ದರೂ ಗಡಿ ಭದ್ರತಾ ಪಡೆ (BSF) ಯ ಕಾವಲು ಠಾಣಗಳು 20 ಕಿ. ಮೀ. ಗೆ ಒಂದರಂತೆ ಮಾತ್ರ ಇರುವುದು ಏಕೆ ? (ಅಸ್ಸಾಮಿನಲ್ಲಿ ಇದಕ್ಕೆ ನಾಲ್ಕರಷ್ಟು ಕಾವಲು ಠಾಣಗಳಿವೆ) ತ್ರಿಪುರಾ ರಾಜ್ಯ ರೈಫಲ್ಸ್‌ಗೆ TNV ಉಗ್ರಗಾಮಿಗಳ ಹತ್ತಿರ ಇರುವಷ್ಟೂ ಶಸ್ತ್ರಾಸ್ತ್ರಗಳನ್ನು ಯಾಕೆ ಒದಗಿಸಿಲ್ಲ. ಅರೆಸೈನಿಕ ತುಕಡಿಗಳು ಸಹ ತ್ರಿಪುರಾದಲ್ಲಿ ಈ ಪ್ರದೇಶದ ಇತರ ರಾಜ್ಯಗಳಿಗೆ ಹೋಲಿಸಿದರೆ ಬಹಳಷ್ಟು ಮೀಸಲು ಪಡೆಯ (CRPF) 30 ತುಕಡಿಗಳು ಇದ್ದರೆ, ತ್ರಿಪುರಾದಲ್ಲಿ 6 ತುಕಡಿಗಳಿವೆ.

ತ್ರಿಪುರಾ ಆದಿವಾಸಿ ರಾಜ್ಯ ಅಲ್ಲವೆಂದು ಕೇಂದ್ರ ಗೃಹ ಮಂತ್ರಿಗಳು ತಿಳಿದುಕೊಳ್ಳಬೇಕು. ಆದಿವಾಸಿಗಳು ರಾಜ್ಯದ ಮೂರನೇಯ ಒಂದು ಪಾಲು ಜನಸಂಖ್ಯೆಗಿಂತಲೂ ಕಡಿಮೆ.ಆದಿವಾಸಿಗಳ ವಿರುದ್ಧ ಯುದ್ಧ ಸಾರಬಾರದು ಅಂತ ಅವರು ನಮಗೆ ಅಪ್ಪಣೆ ಕೊಡಿಸಿದ್ದಾರೆ. ಆದರೆ ಸೈನ್ಯವನ್ನು ಕರೆಸಿಕೊಳ್ಳುವುದು ಎಂದರೆ TNVಯನ್ನು ವಿರೋಧಿಸುತ್ತಿರುವ ಆದಿವಾಸಿಗಳ ವಿರುದ್ಧ ಹೋದಂತೆ. ಹೀಗೆ ಮಾಡಿದರೆ ತ್ರಿ ಪುರಾದಲ್ಲಿ ಜನಾಂಗೀಯ ಗಲಭೆಗಳನ್ನು ಬಡಿದೆಬ್ಬಿಸಬೇಕೆಂದು ಹವಣಿಸುತ್ತಿರುವ TNF,TUJSಗೆ ಭಾರೀ ಅವಕಾಶ.

ಉಗ್ರಗಾಮಿಗಳ ಹಿಂದೆ ವಿದೇಶಿ ಕೈವಾಡವಿದೆ ಎಂಬ ಸತ್ಯವನ್ನು ಕೇಂದ್ರ ಗೃಹ ಮಂತ್ರಿಗಳು ನಿರ್ಲಕ್ಷ ಮಾಡುತ್ತಿದ್ದಾರೆ ಎನ್ನುವುದು ದುರದೃಷ್ಟಕರ. ಭಯೋತ್ಪಾದನೆ ಒಂದುಅಂತರಾಷ್ಟ್ರಿಯ ಪಿಡುಗಾಗಿದೆ.ಇದು ದೆಹಲಿಯಲ್ಲೂ ಇದೆ ಆದ್ದರಿಂದ TNV ವಿರುದ್ಧ ಏಕಾಕಿಯಾಗಿ ಹೋರಾಟ ಮಾಡುತ್ತಿರುವ ಎಡರಂಗದ ಮೇಲೆ, TUJS ಜತೆ ಸೇರಿಕೊಂಡು TNV ಗೆ ಕುಮ್ಮಕ್ಕು ನೀಡುತ್ತಿರುವ ಕಾಂಗ್ರೆಸ್ (ಐ) ಆಪಾದನೆ ಮಾಡುವುದು ಹಾಸ್ಯಾಸ್ಪದ. ಕೇಂದ್ರ ಸರ್ಕಾರ ತ್ರಿಪುರಾದ ವಿರುದ್ಧ ಪೂರ್ವಾಗ್ರಹಗಳನ್ನು ಬಿಡುವುದು ದೇಶದ ಸಮಗ್ರತೆ ದೃಷ್ಟಿಯಿಂದಅಗತ್ಯ.

○

ಚಲನ ಚಿತ್ರವಾದ ಕಾದಂಬರಿ 'ಚಿರಸ್ಮರಣೆ'

'ಮೀನ ಮಾಸತ್ತಿಲೆ ಸೂರ್ಯನ್'

ಲೆನಿನ್ ರಾಜೇಂದ್ರನ್ ಅವರ ನಿರ್ದೇಶನದ ಈ ಚಿತ್ರವನ್ನು ನಾನು ನೋಡಿದೆ. ನನ್ನೊಡನೆ ಇನ್ನಿಬ್ಬರು ಸಂಗಾತಿಗಳು ಬಂದ್ದಿದ್ದರು. ಚಿತ್ರ ನೋಡಿದ ನಂತರ ನನಗೆ ಸಂತೋಷವಾಯಿತು. ಚಿತ್ರದಲ್ಲಿ ಕೆಲವು ಕೊರತೆಗಳಿದ್ದರೂ ಸಹ ಒಟ್ಟಾರೆಯಾಗಿ ಒಂದು ಒಳ್ಳೆಯ ಚಿತ್ರ ಎನಿಸಿತು.

ಅಧಿಕಾರಶಾಹಿಯ, ಭ್ರಷ್ಟಾಚಾರದ, ಸಾಂಸ್ಕೃತಿಕ ಅಧಃ ಪತನದ ಇಂದಿನ ಸಾಮಾಜಿಕ, ರಾಜಕೀಯ ಸನ್ನಿವೇಶದಲ್ಲಿ, ಮಾನವನ ವಿಮೋಚನೆಗಾಗಿ, ಜೀವನದ ಉತ್ಕರ್ಷಣಕ್ಕಾಗಿ,ಸಾಮ್ರಾಜ್ಯಶಾಹಿ, ಪಾಳೆಯಗಾರಿ ವ್ಯವಸ್ಥೆಗಿದಿರಾಗಿ ನಡೆಸಿದ ಹೋರಾಟ ಎಷ್ಟು ತ್ಯಾಗಪೂರ್ಣವಾಗಿತ್ತೆಂಬುದನ್ನು ಚಿತ್ರ ವಿವರಿಸುವುದರೊಂದಿಗೆ ಕಯ್ಯೂರಿನ ರೈತ, ಕೃಷಿ ಕಾರ್ಮಿಕರು ಮತ್ತು ಹುತಾತ್ಮರಾದ ನಾಲ್ಕು ಮಂದಿ ಧೀರ ಸಂಗಾತಿಗಳು ಆರಿಸಿಕೊಂಡ ಜೀವನದ ಮಾರ್ಗ ಇಂದಿಗೂ ನಮ್ಮೆಲ್ಲರ ಜೀವನ ಮಾರ್ಗವಾಗಬೇಕೆಂಬುದನ್ನೂ ತಿಳಿಸುವಲ್ಲಿ ಈ ಚಿತ್ರ ತುಂಬಾ ಯಶಸ್ವಿಯಾಗಿದೆ.

ನಿರ್ದೇಶಕರು ಈ ಹೋರಾಟದ ಕಥೆಯನ್ನು ಸಿನೆಮಾ ಮಾಡುವಾಗ ಇದರಲ್ಲೊಂದು ಪ್ರೇಮ ಕಥೆಯನ್ನು ಸೇರಿಸಿದ್ದಾರೆ. ಚಿರುಕುಂಡರ ಖಾಸಗೀ ಜೀವನ ಚಿತ್ರಿಸುತ್ತದೆ ಚಿರಕುಂಡನಿಗೆ ಒಬ್ಬ ಪ್ರೇಯಸಿ ಇರುವಂತೆ ರೂಪಿಸಿದ ಕಥೆ ಸಹಜವಾಗಿಯೇ ಬಂದಿದೆ. ಅಪ್ಪು ಚಿರುಕುಂಡನ್, ಕುಂಞಂಬು ನಾಯರ್ ಅಬೂಬಕರ್ ಇವರು ನಾಲ್ವರ ಕಥೆಯಾಗಿದೆ ಈ ಚಿತ್ರ. ನೇಣುಗಂಬವನ್ನೇರಿದ ಈ ನಾಲ್ವರು ಹೆಚ್ಚಿನ ವಿದ್ಯಾಭ್ಯಾಸ ಪಡೆಯದ, ಹೊಲಗದ್ದೆಗಳಲ್ಲಿ ದುಡಿಯುವ ಜನ ಇವರು. ಕಯ್ಯೂರು ಗ್ರಾಮದ ಜನರನ್ನು ಜಾಗೃತಗೊಳಿಸುವಲ್ಲಿ ಮಾಸ್ತರರು ಪಾತ್ರ ತುಂಬಾ ಮುಖ್ಯವಾಗಿತ್ತು. ಆ ಸಂಗಾತಿ ಇಂದು ನಮ್ಮೊಡನಿಲ್ಲ ಆದರೂ ಚಿತ್ರದಲ್ಲಿ ಪಾತ್ರವಹಿಸಿದ ನಟ ಆ ಮಾಸ್ತರನಂತೆಯೇ ಇದ್ದು ಒಳ್ಳೆಯ ಅಭಿನಯ ನೀಡಿದ್ದಾರೆ. ಕಯ್ಯೂರು ಹೋರಾಟದೊಂದಿಗೆ, ಜೈಲಿಗೇರಿದ್ದ ಆ ನಾಲ್ಕು ಗೆಳೆಯರೊಂದಿಗೆ ಮತ್ತು ಅಲ್ಲಿನ ರೈತರೊಂದಿಗೆ ನನಗಿರುವ ಸಂಬಂಧ, ಅನುಭವಿಸಿದ ಕ್ರೂರ ದಬ್ಬಾಳಿಕೆಯ ಬಗ್ಗೆ ನಾನಿಲ್ಲಿ ವಿವರಿಸಲು ಹೋಗುವುದಿಲ್ಲ.ಕಯ್ಯೂರು ಘಟನೆ ನಡೆಯುವ ಮೊದಲು ನೀಲೇಶ್ವರದ ರಾಜನ ದುರಾಡಳಿತಕ್ಕೆದುರಾಗಿ ಭೂಮಾಲಕರ ದಬ್ಬಾಳಿಕೆಯ ವಿರುದ್ಧ ಕೃಷಿಕರ ಹೋರಾಟಗಳು ನಡೆಯುತ್ತಿದ್ದವು. ಕಯ್ಯೂರು ಮತ್ತು ಕ್ಲಾಯಿಂಗೋಡ್‌ಗಳ ರೈತರುಯೋಜಿಸಿ ನಡೆಸಿದ ಹೋರಾಟದ ಹಲವಾರು ಅನುಭವಗಳಿವೆ. ಬಡ ಕೃಷಿಕರ ಬೆಳೆದು ಬರುತ್ತಿದ್ದ ಸಂಘಟನಾ ಶಕ್ತಿಯನ್ನೂ ಎತ್ತಿ ತೋರಿಸುವುದರಲ್ಲಿ ನಿರ್ದೇಶಕರು ಸಫಲರಾಗಿದ್ದಾರೆ.

ಹುತಾತ್ಮರು ನೇಣುಗಂಬದೆಡೆಗೆ ಧೀರ ಹೆಜ್ಜೆಗಳನ್ನಿಡುವಾಗ 'ಭೂಮಾಲಕತ್ವ ನಾಶವಾಗಲಿ' 'ಸಾಮ್ರಾಜ್ಯವಾದ ನಾಶವಾಗಲಿ' 'ಕಮ್ಯುನಿಸ್ಟ್ ಪಕ್ಷ ಚಿರಾಯುವಾಗಲಿ, ಎಂಬ ಘೋಷಣೆಯನ್ನು ಮೊಳಗಿಸಿದರು. ಚಿತ್ರದಲ್ಲಿ ಈ ಭಾಗವನ್ನು ಇನ್ನೂ ಸ್ವಲ್ಪ ಬೆಳೆಸಬಹುದಾಗಿತ್ತೆಂದು ತೋರುತ್ತದೆ.

ಇವತ್ತಿನ ಬೂರ್ಷ್ವಾ ರಾಜಕೀಯದಲ್ಲಿ ಯಾವುದನ್ನೂ ತ್ಯಾಗ ಮಾಡಲು ಸಿದ್ಧರಿಲ್ಲದೆ, ಹಣ ಸಂಪಾದನೆಯನ್ನೇ ಗುರಿಯನ್ನಾಗಿಸಿಕೊಂಡಿರುವ ರಾಜಕೀಯ ಮುಖಂಡರುಗಳು ಕಯ್ಯೂರು ಹೋರಾಟದ ಹುತಾತ್ಮರಾದ ನಮ್ಮ ನಾಲ್ಕು ಮಂದಿ ಸಂಗಾತಿಗಳ ಜೀವನವನ್ನು ಒಮ್ಮೆ ತಿರುಗಿ ನೋಡಬಹುದೇ?

ಕಮರ್ಶಿಯಲ್ ಚಿತ್ರಗಳ ಸಾಗರದಲ್ಲಿ ನಮಗೊಂದು ವಿಶ್ರಾಂತಿ ತಾಣವಾದ ದ್ವೀಪದಂತಿತ್ತು, ಈ ಚಿತ್ರ. ಕಯ್ಯೂರು ಹೋರಾಟದ ತ್ಯಾಗಮಯ ಕಥೆಯನ್ನು ಕಣ್ಮುಂದೆ ತಂದು ನಿಲ್ಲಿಸುವ ಈ ಚಿತ್ರ ನಮ್ಮಲ್ಲಿ ನವನವೋನ್ಮೇಶ ಶಾಲಿನಿಯಾದ ಸ್ಫೂರ್ತಿಯನ್ನು ತುಂಬುತ್ತದೆ.

ಕಾ. ಇ. ಕೆ. ನಾಯನಾರ್

ಸಾಂಸ್ಕೃತಿಕ ರಂಗ

ಐ. ಟಿ. ಸಿ. ಕಾರ್ಮಿಕ ಸಂಘದ ಚುನಾವಣೆ :

ಸಿ. ಐ. ಟಿ. ಯು. ಗೆ ಭಾರೀ ಗೆಲವು

ಕಾರ್ಮಿಕರು ಧೃಡ ನಿಶ್ಚಯವುಳ್ಳವರಾದರೆ ಆಳುವ ವರ್ಗದ ಮಂತ್ರಿ ಮಾನ್ಯರುಗಳೇ ಸ್ವತಃ ಪ್ರಚಾರ ಮಾಡಿದರೂ, ಕೋರ್ಟು ಅಧಿಕಾರಶಾಹಿಗಳ ದುರುಪಯೋಗ ಮಾಡಿದರೂ ಸುಳ್ಳು ಅಪಾದನೆಗಳು ಅವರ ಕಣ್ಣಿಗೆ ಮಣ್ಣೆರಚಲಾರವು ಎಂಬುದಕ್ಕೆ ಒಂದು ಉಜ್ವಲ ಉದಾಹರಣೆ, ಇತ್ತೀಚಿಗೆ ನಡೆದ ಐಟಿಸಿ ಕಾರ್ಮಿಕರ ಸಂಘದ ಚುನಾವಣೆ.

ನಾಲ್ಕು ವರ್ಷಗಳಿಂದ ಸಿ. ಐ. ಟಿ. ಯು ನೇತೃತ್ವದಲ್ಲಿ ನಡೆದ ಹೋರಾಟಕ್ಕೆ ಅದು ಕಾರ್ಮಿಕರಲ್ಲಿ ಮೂಡಿಸಿರುವ ಎಚ್ಚರಕ್ಕೆ ಒಂದು ಉದಾಹರಣೆ. ಅದು

1980 ರಿಂದಲೂ ಐ. ಟಿ. ಸಿ. ಆಡಳಿತ ವರ್ಗ ಸಿ. ಐ. ಟಿ. ಯು ಬೆಂಬಲಿಗರಿಗೆ ಬಹುಮತವಿಲ್ಲವೆಂದು ಹೇಳುತ್ತಾ, ತನ್ನ ಕೈಗೊಂಬೆ ಸಂಘಟನೆಗಳಿಗೆ ಸೇರಿದವರಿಗೆ ಮಾನ್ಯತೆ ನೀಡಿ ಬೇರೆಯವರೊಂದಿಗೆ ಯಾವುದೇ ಮಾತುಕತೆ ನಡೆಸುವುದಿಲ್ಲವೆಂಬ ಧೋರಣೆ ತಾಳಿತ್ತು. ಜನತಾ ಸರ್ಕಾರ ಕೂಡ ಮಾಲೀಕರ ನಿಲುವನ್ನು ಬೆಂಬಲಿಸಿತು. ಶ್ರೀಮಾನ್ ರಾಚಯ್ಯ, ಬೊಮ್ಮಾಯಿ ಮುಂತಾದವರು ಕಾರ್ಮಿಕ ಸಂಘಕ್ಕೆ ಹೊರಗಿನವರ ಅಗತ್ಯವಿಲ್ಲವೆಂದು ಪ್ರಚಾರ ಮಾಡಿದರು.

ಆಡಳಿತ ವರ್ಗವು ತಮ್ಮ ಕೈಗೊಂಬೆ ಸಂಘದ ಸಹಾಯದಿಂದ ಕಾರ್ಮಿಕರ ಅನೇಕ ಸೌಲಭ್ಯಗಳನ್ನು ನಿರಾಕರಿಸಿತು 1980ರಲ್ಲಿ ವಜಾ ಆದ 40 ಜನರ ವಿವಾದವನ್ನು ಕಾರ್ಮಿಕ ಟ್ರಿಬ್ಯುನಲ್‌ಗೆ ವರ್ಗಾಯಿಸಿದ್ದು ಸರಿಯಲ್ಲವೆಂದು ಹೇಳಿದ ಆಡಳಿತ ವರ್ಗ ಹೈಕೋರ್ಟ್ ತೀರ್ಪಿನ ವಿರುದ್ಧ ಸುಪ್ರೀಂಕೋರ್ಟಿಗೆ ಹೋಗಿದ್ದೆ.

ಈ ಪರಿಸ್ಥಿತಿಯಲ್ಲಿ ಹೊಸ ಸಂಘವು ಆಡಳಿತ ವರ್ಗಕ್ಕೆ ಪತ್ರ ಬರೆದರೆ ಅದು ಜವಾಬು ನೀಡುತ್ತಿಲ್ಲ. ಕಾರ್ಮಿಕ ಕಮಿಶನರ್ ಕರೆಯುವ ಸಂಧಾನಕ್ಕೆ ಹಾಜರಾಗುತ್ತಿಲ್ಲ ಬೋನಸ್ ಕಾಯಿದೆಯನ್ನು ಅನುಸರಿಸುತ್ತಿಲ್ಲ.

ಕಾರ್ಮಿಕ ನ್ಯಾಯಾಲಯದಲ್ಲಿ 135 ದಿನದ ಮುಷ್ಕರದ ಅವಧಿಯ ಸಂಬಳದ ಬಗ್ಗೆ ಸಿ. ಐ. ಟಿ. ಯು. ಸಂಘ ಆಕ್ಷೇಪ ಎತ್ತಿತು. ಈ ಬಗೆಗಿನ ವಿಚಾರಣೆ 3-12-86ಕ್ಕೆ ಹಾಕಲಾಗಿತು ಈ ಅವಧಿಯಲ್ಲಿ ಚುನಾವಣೆಯ ನಾಟಕ ಮಾಡಿ ಕಾರ್ಮಿಕರಿಗೆ ಮುಷ್ಕರದ ಅವಧಿಯ ಸಂಬಳ ಸಿಗದಂತೆ ಮಾಡ ಬೇಕೆಂದು ಕೈಗೊಂಬೆ ಸಂಘದ ಪ್ರತಿನಿಧಿಗಳು ಆಡಳಿತವರ್ಗದ ಕುಮ್ಮಕ್ಕಿನಿಂದ ಚುನಾವಣೆ ಘೋಷಣೆ ಮಾಡಿದರು. ಸದಸ್ಯರಲದವರು ಕೂಡ ಸದಸ್ಯರಾಗುವುವೆಂದು ನೋಟೀಸ್ ಹಾಕಿದರು. ಅದರ ಪ್ರಕಾರ 242 ಮಂದಿ ಕಾರ್ಮಿಕರು ಸದಸ್ಯತ್ವ ಪಡೆದರು, ಇದರಿಂದ ಆಡಳಿತ ವರ್ಗ ಗಾಬರಿಗೊಂಡು ಹೊಸ ಸದಸ್ಯರಿಗೆ ಮತದಾನದ ಹಕ್ಕಿಲ್ಲವೆಂದು ಘೋಷಿಸಿ ಮತದಾರರ ಪಟ್ಟಿಯಲ್ಲಿ ಅವರ ಹೆಸರುಗಳನ್ನು ಕೈ ಬಿಟ್ಟರು. 11-11-86 ರಂದು ಕಾರ್ಮಿಕರು ಸಂಘದ ಕಛೇರಿಗೆ ತೆರಳಿ ಪ್ರತಿಭಟನೆ ಸೂಚಿಸಿದರು. ಚುನಾವಣಾಧಿಕಾರಿ ಹೊಸ ಸದಸ್ಯರ ಹೆಸರುಗಳನ್ನು ಮತದಾರ ಪಟ್ಟಿಯಲ್ಲಿ ಸೇರ್ಪಡೆ ಮಾಡುವುದಾಗಿ ಬರವಣಿಗೆ ಮೂಲಕ ಆಶ್ವಾಸನೆ ನೀಡಿದರೂ ಮುಂದೆ ಚುನಾವಣಾ ತಕರಾರು ಸಮಿತಿ ಅಧ್ಯಕ್ಷರು ತಳ್ಳಿ ಹಾಕಿದರು ಹೈಕೋರ್ಟಿನಲ್ಲಿ ಹಾಕಿದ ಅರ್ಜಿ ಕೂಡ ಫಲ ನೀಡಲಿಲ್ಲ.

ಚುನಾವಣೆಯ ಹಿಂದಿನ ದಿನವಷ್ಟೇ ಹೈಕೋರ್ಟ್ ತೀರ್ಪು ಹೊರಬಿತ್ತು. ಸಿ. ಐ. ಟಿ. ಯು ಸಂಘದ ಸದಸ್ಯರು ನಾಮಪತ್ರ ಹಾಕುವುದನ್ನು ಈ ರೀತಿ ತಪ್ಪಿಸಲಾಯಿತು

ಇದನ್ನು ಕಾರ್ಮಿಕ ವರ್ಗ ಒಂದು ಸವಾಲಾಗಿ ಸ್ವೀಕರಿಸಿತು. ಮೊದಲೇ ನಿರ್ಧರಿಸಿದ ಅಭ್ಯರ್ಥಿಗಳಲ್ಲದಿದ್ದರೂ ಯಾರು ನಾಮಪತ್ರ ಈಗಾಗಲೇ ಹಾಕಿದ್ದರೊ ಅವರಲ್ಲಿಯೇ ಅಭ್ಯರ್ಥಿಗಳನ್ನು ನಿರ್ಧರಿಸಿ ರಾತ್ರೋರಾತ್ರಿ ಕಾರ್ಮಿಕರ ಮನೆಗಳಿಗೆ ತೆರಳಿ ಪ್ರಚಾರ ಮಾಡಿದರು. ಚುನಾವಣಾ ಚಿಹ್ನೆ ಒಬ್ಬೊಬ್ಬರಿಗೆ ಒಂದೊಂದು ರೀತಿ ಇದ್ದರೂ ಚುನಾವಣೆಯಲ್ಲಿ ಸಿ. ಐ. ಟಿ. ಯು. ನ ಅಭ್ಯರ್ಥಿಗಳು ಅತ್ಯಧಿಕ ಬಹುಮತದಿಂದ ಗೆದ್ದು ಬಂದರು.

ಅಧ್ಯಕ್ಷ ಪದವಿಗೆ ಸ್ಪರ್ಧಿಸಿದ್ದ ಜನತಾ ಪಕ್ಷದ ಶಿವರಾಜ್ [ಅವರು ವಿಧಾನಸಭಾ ಸ್ಥಾನಕ್ಕೆ ಜನತಾಪಕ್ಷದ ಅಭ್ಯರ್ಥಿಯಾಗಿದ್ದವರು] ಕೇವಲ 4(0 ಮತ ಪಡೆದರು ಅವರ ವಿರುದ್ಧ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ್ದ ಸಿ.ಐ. ಟಿ. ಯು ಅಭ್ಯರ್ಥಿಗೆ 1C00 ಮತಗಳು ಬಂದವು ಇದು ಕಾರ್ಮಿಕರ ಧೃಡ ನಿಶ್ಚಯ ಸೂಚಿಯಾಗಿದೆ.

"ಉದಯ ಗೀತ"

ಹೊಸ ವರುಷದ
ಹೊಸ ಬೆಳಕು
ಮೂಡುತ್ತಿದ್ದಂತೆ
ಹಕ್ಕಿಗಳುಲಿದವು
"ಸಾಮ್ರಾಜ್ಯಶಾಹಿ
ನಶಿಸಲಿ !
ಸಮಾಜವಾದ
ಚಿರಾಯುವಾಗಲಿ !"

ಕುಳಿರ್ಗಾಳಿ
ಮಧುಕರನ
ಜೊತೆಗೂಡಿ
ಸುಂಯ್‌ಗುಟ್ಟಿತು
"ವಿಶ್ವ ಶಾಂತಿಗೆ
ಜಯವಾಗಲಿ"

ಹಸಿದ
ಸಹಸ್ರ ಸಹಸ್ರ
ಉದರಗಳು
ಒಕ್ಕೊರಲಲಿ
ಸಾರಿದವು
"ಅಣ್ವಸ್ತ್ರ ಬೇಡ !
ಅನ್ನ ಬೇಕು !"

ಬೂರ್ಜ್ವಾ ಸಮಾಜದ
ಕಪ್ಪುಹಾಳೆಯ
ಮೇಲೆ ಮೂಡಿದ
ಕೆಂಪು ಅಕ್ಷರಗಳು
ಧ್ವನಿ ಎತ್ತಿ
ಘೋಷಿಸಿದವು
"ಇಂಕ್ವಿಲಾಬ್
ಜಿಂದಾಬಾದ್"

—ನಾಗೇಶ್

ಬೀಡಿ ಕಾರ್ಮಿಕರ ಮುಷ್ಕರ

ಪಡುಬಿದ್ರಿ, ಕಾಪು, ಬ್ರಹ್ಮಾವರ, ಕೊಡವೂರು ಮುಂತಾದ ಆಸುಪಾಸಿನ ಸ್ಥಳಗಳಿಂದ ಮೆರವಣಿಗೆಯಲ್ಲಿ ಬಂದ ನೂರಾರು ಬೀಡಿ ಕಾರ್ಮಿಕರು ಉಡುಪಿಯ ತಾಲೂಕು ಕಚೇರಿಯೆದುರು ಬೆಳಗಿನಿಂದ ಸಂಜೆಯವರೆಗೆ ಧರಣಿ ಮುಷ್ಕರ ನಡೆಸಿದರು. ಒಂದು ದಿನದ ಮುಷ್ಕರಕ್ಕೆ ರಾಜ್ಯ ಬೀಡಿ ಫೆಡರೇಶನ್ ನೀಡಿದ ಕರೆಗೆ ಅನುಗುಣವಾಗಿ ಈ ಕಾರ್ಯಕ್ರಮ ನಡೆಯಿತು. ಕಾರ್ಮಿಕ ಮುಂಖಂಡರಾದ ಕಾ. ಡೇವಿಡ್ ಕರ್ಕಡ, ಮುಷ್ಕರದನೇತೃತ್ವ ವಹಿಸಿದ್ದರು.

ಡಿ. ವೈ. ಎಫ್. ಐ. ರಚನೆ

ದ. ಕನ್ನಡ ಜಿಲ್ಲೆಯ ಕುಂದಾಪುರ ತಾಲೂಕಿನ ಕುಂಭಾಶಿ ಗ್ರಾಮದಲ್ಲಿ ಡಿಸೆಂಬರ್ 14 ರಂದು ಯುವಜನರ ಸಭೆ. ಕಾ. ಕೆ. ಗೋವಿಂದವರ ಅಧ್ಯಕ್ಷತೆಯಲ್ಲಿ ಕಾ.ವೆಂಕಟೇಶ ಕೋಣಿ ಮುಖ್ಯ ಅತಿಥಿಗಳಾಗಿ ಆಗಮಿಸಿ ಸಭೆಯನ್ನುದ್ದೇಶಿಸಿ ಮಾತನಾಡಿದರು. ಸಭೆಯಲ್ಲಿ 13 ಮಂದಿ ಸದಸ್ಯರನ್ನೊಳಗೊಂಡ ಒಂದು ಸಮಿತಿಯನ್ನು ರಚಿಸಲಾಯಿತು. ಅಧ್ಯಕ್ಷರಾಗಿ ಕಾ. ಕೆ. ಗೋವಿಂದ ಕಾರ್ಯದರ್ಶಿಯಾಗಿ ಕಾ. ಕೆ. ಉದಯಕುಮಾರ್ ಅವರನ್ನು ಸಭೆಯ ಸರ್ವಾನುಮತದಿಂದ ಆಯ್ಕೆಮಾಡಿದೆ.

ಈ ವಾರ....

ಹೊಸವರ್ಷದಿಂದ ಆರಂಭಿಸಲಾಗುವ ಈ ಕಾಲಂನಲ್ಲಿ ವಾರದ ಅಂತರರಾಷ್ಟ್ರೀಯ ಹಾಗೂ ಕರ್ನಾಟಕದ ಪ್ರಮುಖ ಘಟನೆಗಳನ್ನು ನೀಡಲಾಗುತ್ತದೆ.

ಜಗತ್ತಿನಲ್ಲಿ

* ಕರಾಚಿಯಲ್ಲಿನ ದಂಗೆ–ಜಿಯಾನ ಸರ್ವಾಧಿಕಾರಿ ಆಡಳಿತವೆ ಹೊಣೆ –ಪಾಕ್ ವಿರೋಧಿ ಮುಖಂಡರ ಟೀಕೆ ಡಿ–24

* ಒಂದು ಕಡೆ ಇರಾನ್‌ಗೆ ಶಸ್ತ್ರಾಸ್ತ್ರ- ಮತ್ತೊಂದು ಕಡೆ ಇರಾಕ್‌ಗೆ ಸಿ.ಐ.ಎ ಯಿಂದ ಇರಾನ್ ಬಗ್ಗೆ ಗುಪ್ತ ಮಾಹಿತಿ ನೀಡಿಕೆ ಬಹಿರಂಗ-ಡಿ–26

* ಭಾರತ–ಪಾಕ್‌ವಿದೇಶಾಂಗ ಕಾರ್ಯದರ್ಶಿಗಳ ಸಮಲೋಚನೆ ಅನಾಕ್ರಮಣ, ಶಾಂತಿ ಬಗ್ಗೆ ಒಪ್ಪಂದದ ಚರ್ಚೆಯಲ್ಲಿ ಪ್ರಗತಿಯಿಲ್ಲ. ಡಿ–28

* ಕ್ಯೂಬಾದ ಪ್ರಭುತ್ವ ಮಂಡಳಿಯ ಅಧ್ಯಕ್ಷರಾಗಿ ಫಿಡೆಲ್ ಕ್ಯಾಸ್ಟ್ರೋಪುನರಾಯ್ಕೆ ಡಿ–28

ಭಾರತದಲ್ಲಿ

* ಹೊಸ ಎಸ್. ಜಿ. ಪಿ. ಸಿ. ಆಡಳಿತ ಮಂಡಳಿಯಿಂದ ಅಕಾಲ್ ತಖ್ತ್ ಪ್ರಧಾನ ಅರ್ಚಕರ ವಜಾ ಡಿ—24

* ಜೀವ ಹಾನಿಕರ ವಸ್ತುಗಳ ಉತ್ಪಾದಕರು ಅಪಘಾತವಾದರೆ ಪರಿಹಾರ ನೀಡಲೇಬೇಕು ಸುಪ್ರೀಂ ಕೋರ್ಟ್ ಡಿ–25

* ಟಿ. ಎನ್. ವಿ. ಭಯೋತ್ಪಾದಕರಿಂದ 8 ಜನ ಅಮಾಯಕರ ಕೊಲೆ

* ಪ. ಬಂಗಾಳ ಎಡರಂಗದ 16 ಅಂಶದ ಚುನಾವಣಾ ಘೋಷಣೆ ಬಿಡುಗಡೆ

* ಗಣತಂತ್ರ ದಿನಾಚರಣೆಗೆ ಮುಸ್ಲಿಂ ಲೀಗ್ ಬಹಿಷ್ಕಾರ – ಕೇರಳ ವಿಧಾನ ಸಭೆಯಲ್ಲಿ ಚರ್ಚೆ

ಕರ್ನಾಟಕ

* ಕರ್ನಾಟಕದ 11,£00 ಶಾಲಾ ಶಿಕ್ಷಕರಿಗೆ ಈ ವಾರದಲ್ಲಿ ಬಡ್ತಿ–ಶಿಕ್ಷಣ ಸಚಿವ

* ಜಿಲ್ಲಾ ಪರಿಷತ್ ವ್ಯವಸ್ಥೆ ಹಾಗೂ ಸ್ಥಳೀಯ ಸಂಸ್ಥೆಗಳಲ್ಲಿ ಪಕ್ಷಾಂತರ ನಿಷೇಧ

* ಜನಾರ್ಧನ ಪೂಜಾರಿಯಸುಳ್ಳು ಹೇಳಿಕೆ–ಕೇಂದ್ರದ ನೆರವು ಶೇ. 52 ಅಲ್ಲ ಕೇವಲ ಶೇ. 26 ರಷ್ಟು

* ಕನ್ನಡಿಗರಿಗೇ ಉದ್ಯೋಗ–ಸರೋಜಿನಿ ಮಹಿಷಿ ವರದಿ ಬಿಡುಗಡೆ.

ಹಂಚಿನ ಕಾರ್ಮಿಕರ ಹೋರಾಟ

ಚಿಕ್ಕಮಗಳೂರು ಜಿಲ್ಲೆಯ ಕಡೂರಿನಲ್ಲಿ ದಿ ಸ್ಟಾಂಡರ್ಡ್ ಟೈಲ್ ಕಂಪೆನಿ ಎಂಬ ಹಂಚು ತಯಾರಿಸುವ ಕಾರ್ಖಾನೆಯ 65 ಕಾರ್ಮಿಕರನ್ನು ಮಾಲೀಕರು ಡಿಸೆಂಬರ್ 13ರಂದು ಕೆಲಸದಿಂದ ವಜಾಮಾಡಿದ್ದಾರೆ. ಕಾರ್ಮಿಕರು 15 ವರ್ಷಗಳಿಂದಲೂ ಈ ಕಂಪನಿಯಲ್ಲಿ ದುಡಿಯುತ್ತಾ ಬಂದಿದ್ದರೂ ಕೂಡ ಕಾರ್ಮಿಕರ ಕಾಯಿದೆಯಲ್ಲಿ ಅಡಕವಾಗಿರುವ ಅನೇಕ ಸೌಲಭ್ಯಗಳನ್ನು ಒದಗಿಸಿಲ್ಲ. ಕಾರ್ಮಿಕರಿಗೆ ಉದ್ಯೋಗದ ಭದ್ರತೆಯಿಲ್ಲ,ಕಾರ್ಖಾನೆಯಲ್ಲಿ ಸ್ಥಾಯಿ ನಿಬಂಧನೆಗಳ ನೊಂದಾವಣೆ ಇರುವುದಿಲ್ಲ, ಕುಡಿಯುವ ನೀರಿನ ವ್ಯವಸ್ಥೆ ಮೂತ್ರಿಗಳು ಮತ್ತು ಕಕ್ಕಸ್ಸು ಮನೆ, ಗಾಯಗೊಂಡಕಾರ್ಮಿಕರಿಗೆ ಔಷಧೋಪಚಾರ ಇವು ಯಾವುವೂ ಇಲ್ಲ. ದಕ್ಷಿಣ ಕನ್ನಡ ಜಿಲ್ಲೆಯ ಹಂಚಿನ ಕಾರ್ಮಿಕರಿಗೆ 22ರೂಪಾಯಿ ದಿನಗೂಲಿ ದೊರೆತರೆ ಇಲ್ಲಿ ಅವರಿಗೆ ಕೇವಲ ರೂ 6 ರಿಂದ 12ರವರೆಗೆ ಸಿಗುತ್ತದೆ. ಮಾಲೀಕರ ಈ ಶೋಷಣೆಯ ವಿರುದ್ಧ ಹೋರಾಡಲು ನಿರ್ಧರಿಸಿ ಕಡೂರಿನ ಎರಡು ಹಂಚಿನ ಕಾರ್ಖಾನೆಯ ಕಾರ್ಮಿಕರು ಸಿ.ಐ.ಟಿ.ಯು.ಗೆ ಸೇರ್ಪಡೆಯಾದ "ಕಾಫಿಕ್ಯೂರಿಂಗ್' ಮತ್ತು ಇತರ ಕಾರ್ಮಿಕ ಸಂಘ" ದ ಸದಸ್ಯರಾದರು ನವೆಂಬರ್ 6ರಂದು ತಮ್ಮ ಬೇಡಿಕೆಗಳನ್ನೊಳಗೊಂಡ ಮನವಿ ಪತ್ರವನ್ನು ಆಡಳಿತ ವರ್ಗಕ್ಕೆ ನೀಡಿದರು. ಅಲ್ಲಿಂದೀಚೆಗೆ ಮಾಲೀಕರು ನಾನಾ ರೀತಿಯ ಕಿರುಕುಳ ಕೊಡಲು ಆರಂಭಿಸಿದರು. ಮತ್ತು ಡಿಸೆಂಬರ್ 13ರಂದು 65 ಕಾರ್ಮಿಕರನ್ನು ವಜಾ ಮಾಡಿದರು. ಕಾರ್ಮಿಕ ಅಧಿಕಾರಿಗಳೊಡನೆ ಏರ್ಪಡಿಸಿದ್ದ ಸಂಧಾನ ಸಭೆಗಳಿಗೂ ಮಾಲಿಕರು ಹಾಜರಾಗುತ್ತಿಲ್ಲ. ಕಾರ್ಮಿಕರು ತಮಗಾಗಿರುರುವ ಅನ್ಯಾಯದ ವಿರುದ್ಧ ಹೋರಾಟವನ್ನು ಮುಂದುವರಿಸುತ್ತಿದ್ದಾರೆ. ಇತರ ಕಾರ್ಮಿಕರ, ಮತ್ತು ಜನತೆಯ ಬೆಂಬಲವನ್ನು ಕೋರಿದ್ದಾರೆ.

ಪಕ್ಷದ ಕಚೇರಿ ಉದ್ಘಾಟನೆ

ರಾಯಚೂರು ತಾಲೂಕಿನ ರಘುನಾಥನ ಹಳ್ಳಿಯಲ್ಲಿ ಸಿ ಪಿ ಐ (ಎಂ)ನ ಕಛೇರಿಯನ್ನು ಡಿಸೆಂಬರ್ 16 ರಂದು ಉದ್ಘಾಟಿಸಲಾಗಿದೆ. ಈ ಸಮಾರಂಭಕ್ಕೆ ಜಿಲ್ಲಾ ಸಮಿತಿಯಿಂದ ಕಾ. ಚಂದ್ರಶೇಖರ ಬಾಳೆ, ಕಾ. ರಾಮನಗೌಡ, ಬಿ ಎಸ್ ಪಾಟೀಲ್ ಆಗಮಿಸಿದ್ದರು. ಕಾ. ಆಲಮ ಆಲಿ ಸಾಹೇಬ ಅವರು ಧ್ವಜಾರೋಹಣ ಮಾಡಿದರು. ಕಾ. ಬಸವರಾಜ ಟೇಲರ ಸ್ವಾಗತಿಸಿದರು. ಕಚೇರಿಯನ್ನು ಉದ್ಘಾಟಿಸಿದ ಕಾ. ಚಂದ್ರಶೇಖರ ಬಾಳೆ ಅವರು ರೈತ ಕಾರ್ಮಿಕರಿಗಾಗಿ ವಿದ್ಯಾರ್ಥಿ ಯುವಜನರಿಗಾಗಿ ಹೋರಾಡುವ ಸಿ ಪಿ ಐ ಎಂ ಪಕ್ಷಕ್ಕೆ ಬೆಂಬಲ ನೀಡಿ ಜಿಲ್ಲಾ ಪರಿಷತ್ ಚುನಾವಣೆಯಲ್ಲಿ ಜಯಗೊಳಿಸುವಂತೆ ಮಾಡಬೇಕೆಂದು ವಿನಂತಿಸಿದರು. ಕರ್ನಾಟಕ ಪ್ರಾಂತ ರೈತ ಸಂಘದ ರಘುನಾಥನ ಹಳ್ಳಿ ಘಟಕದ ಕಾರ್ಯದರ್ಶಿ ಕಾ. ವಿ ಕರೆಪ್ಪ ವಂದಾನಾರ್ಪಣೆ ಮಾಡಿದರು.

ಭಾಷಾ ಅಲ್ಪಸಂಖ್ಯಾತರ ವಲಸೆ ಒಂದು ಸಮಸ್ಯೆಯೇ ?

ಕರ್ನಾಟಕದಲ್ಲಿ ಇದೇನು ನಡೆದಿದೆ ? ಪ್ರಜ್ಞಾವಂತರೆಲ್ಲರೂ ಯೋಚಿಸಬೇಕಾದ ವಿಷಯ.

ಈ 'ವಲಸೆ' ಎಂಬ ಸಮಸ್ಯೆಯ ಮೂಲ ಎಲ್ಲಿದೆ ? ದುಡಿಯುವ ವರ್ಗದ ಐಕ್ಯತೆ ಕೊನೆಗೆ ದೇಶದ ಐಕ್ಯತೆಗೆ ಕೊಡಲಿ ಪೆಟ್ಟಾಗುವ ಈ ಮಾತುಗಳನ್ನು ಮೂಲದಲ್ಲಿಯೇ ಚಿವುಟಬೇಕು.

"ಸುಂದರ ಬಾಂಬೆ ಎಂದರೆ ಮರಾಠಿ ಬಾಂಬೆ" ಇದು ಕಾಂಗ್ರೆಸ್ ಶತಮಾನೋತ್ಸವದ ಗುಜು ಗುಂಪಲಿಗೆಂದು ಬಾಂಬೆಗೆ ಭೇಟಿ ನೀಡಿದ ಪ್ರಧಾನಿ ರಾಜೀವ ಗಾಂಧಿಯವರನ್ನು ಎದುರುಗೊಳ್ಳಲು ಕಾಂಗ್ರೆಸ್ಸಿನ ಆಪ್ತಮಿತ್ರ ಶಿವಸೇನೆ ಗೋಡೆಗಳ ಮೇಲೆ ಮೂಡಿಸಿದ ಸ್ವಾಗತ ಗೀತೆ.

ಸರಿ ಅದಕ್ಕೆ ಪ್ರತಿಧ್ವನಿ ಮೂಡಲು ತಡವೇಕೆ ? ತಮ್ಮ ಭಾಷೆಯನ್ನು ತಾವು ಕಲಿಯದಿದ್ದರೂ ಪರವಾಗಿಲ್ಲ ಭಾಷಾ ಅಲ್ಪಸಂಖ್ಯಾತರು ಅವರ ಮಾತೃ ಭಾಷೆಯನ್ನು ಕಲಿಯಲು ಬಿಡಬಾರದು ಎಂಬ ಗೋಕಾಕ್ ವರದಿ ಚಳುವಳಿಯಲ್ಲಿ ಸದ್ದುಗದ್ದಲ ಮಾಡುತ್ತಾ ಹುಟ್ಟಿದ 'ಸಾಹಿತಿ-ಕಲಾವಿದರ ಬಳಗ' ಬೆಂಗಳೂರಿನಲ್ಲಿ ಕರೆದ ಕನ್ನಡ ಸಂಘ ಸಂಸ್ಥೆಗಳ ಸಮಾವೇಶವೊಂದರಲ್ಲಿ, "ಸುಂದರ ಬೆಂಗಳೂರು ಕನ್ನಡ ಬೆಂಗಳೂರು" ಎಂಬ ಘೋಷಣೆ ಹುಟ್ಟಿಯೇ ಬಿಟ್ಟಿತು. ಇದನ್ನು ನೀಡಿದವನು ಒಬ್ಬ ಕಾರ್ಮಿಕ ಎಂಬ ವಿಶೇಷ ಸೂಚನೆಯೂ ಇದೆ, ಲಂಕೇಶ ಪತ್ರಿಕೆಯ ದೀಪಾವಳಿ ಸಂಚಿಕೆಯ ಲೇಖನವೊಂದರಲ್ಲಿ.

ಬಿಕ್ಕಟ್ಟಿಗೊಳಗಾದ, ನಿರುದ್ಯೋಗ ಪೀಡಿತ ಜಗತ್ತಿನಾದ್ಯಂತ ಇಂತಹವೇ ಪ್ರತಿಕ್ರಿಯೆ ಇಂದು ಮೂಡಿ ಬರುತ್ತಿದೆ. ಭಾರತೀಯರನ್ನು ಲಂಡನ್ ಪ್ರವೇಶಿಸಲು ಅಡ್ಡಿ ಮಾಡುತ್ತಿರುವ, ಅವರನ್ನು ಅವಹೇಳನಕಾರಿ ಪರೀಕ್ಷೆಗಳಿಗೆ ಒಳಪಡಿಸುತ್ತಿರುವ, ಬ್ರಿಟನ್ ಅನ್ನು ನೋಡಿ. ಹಾಗೆಯೇ ಪ್ರವೇಶಕ್ಕೆ ಕಠಿಣ ನಿರ್ಬಂಧ ವಿಧಿಸಲಾಗುತ್ತಿರುವ ಭೂತಲಸ್ವರ್ಗ !! ಅಮೇರಿಕಾವನ್ನು ನೋಡಿ. ಅರಬ್ ದೇಶಗಳಿಗೆ ಆತುರದಿಂದ ಹೋಗಿ ಕಾತುರದಿಂದ ಹೊರಬರುತ್ತಿರುವ ಜನರನ್ನು ಕೇಳಿ, ಫ್ರಾನ್ಸ್‌ನಲ್ಲಿ, ಪಶ್ಚಿಮ ಜರ್ಮನಿಯಲ್ಲಿ ಇದೇ ರೀತಿಯ ನಡವಳಿಕೆ. ಅಲ್ಲೆಲ್ಲಾ ವಲಸೆಯನ್ನು ವಿರೋಧಿಸಲೆಂದೇ ಹೊಸ ಪಕ್ಷಗಳು ಹುಟ್ಟುತ್ತಿವೆಯಂತೆ. ಇದೇ ಸರಪಳಿಯ ಮುಂದಿನ ತುಂಡು 'ಸಿಂಹಳ ಸಿಂಹಳೀಯರಿಗಾಗಿ,' 'ಅಸ್ಸಾಂ ಅಸ್ಸಾಮೀಯರಿಗಾಗಿ' 'ಸಿಕ್ಕರಿಗಾಗಿ ಖಲೀಸ್ತಾನ್,' 'ಗೋವ ಗೋವನ್ನರಿಗಾಗಿ' 'ಮಹಾರಾಷ್ಟ್ರ ಮರಾಠಿಗರಿಗಾಗಿ' ಎಂಬ ಘೋಷಣೆಗಳು, ನಮ್ಮ ರಾಜ್ಯದಲ್ಲಿಯೇ 'ಕೊಡಗು ಕೊಡಗರಿಗಾಗಿ' ಎಂಬುದು ಕೇಳಿ ಬರುತ್ತಿಲ್ಲವೆ ?

ನೂರಾರು ವರ್ಷಗಳ ಕಾಲ ಅಣ್ಣ ತಮ್ಮಂದಿರಂತೆ, ಗೆಳೆಯರಂತೆ, ಬಾಳಿದವರು ಇತ್ತೀಚಿನ ಕೆಲವು ವರ್ಷಗಳಲ್ಲಿ ಏಕೆ ಇದ್ದಕ್ಕಿಂದಂತೆ ಈ ರೀತಿ ವರ್ತಿಸುತ್ತಿದ್ದಾರೆ ?

ಸಾಹಿತಿ – ಕಲಾವಿರೆ ಬಳಗದ ಡಾ|| ಚಿದಾನಂದಮೂರ್ತಿಯವರ ಮಾತುಗಳನ್ನು ಕೇಳಿ :

"ಕನ್ನಡದ ಅಥವಾ ಕನ್ನಡಿಗರ ಮೇಲಿನ ಸಮಸ್ಯೆಗಳೆಲ್ಲವೂ ಬೇಗ ಪರಿಹಾರವಾಗಬೇಕೆಂಬ ಬಗ್ಗೆ ಅನುಮಾನವೇ ಇಲ್ಲವಾದರೂ ಯಾವುದನ್ನಾದರೂ ವಿಶೇಷವಾಗಿ ಎತ್ತಿ ಹೇಳಿ ಎಂದು ನನ್ನನ್ನು ಕೇಳಿದರೆ ಪರಸ್ಪರ ಸಂಬಂಧಿಸಿರುವ ಗಡಿ ಮತ್ತು ವಲಸೆಗಳನ್ನು ನಾನು ಆಯ್ಕೆ ಮಾಡುತ್ತೇನೆ.

ಶಿಕ್ಷಣ ಮಾಧ್ಯಮವಾಗಿ ಕನ್ನಡ ಕಾರ್ಯ ತಡವಾದರೂ ಕನ್ನಡನಾಡು, ಭಾಷೆ ಇರುತ್ತವೆ. ಆದರೆ ಗಡಿ ಅನ್ಯ ಭಾಷೀಯರ ವಲಸೆಗಳತ್ತ ತೀವ್ರ ಗಮನಹರಿಸುವುದು ಇಂದಿನ ಅತ್ಯಗತ್ಯಗಳಲ್ಲಿ ಒಂದಲ್ಲ, ಏಕೈಕ ಅತ್ಯಗತ್ಯ" ಎನ್ನುತ್ತಾರೆ. (ಲಂಕೇಶ್ ಪತ್ರಿಕೆ – ದೀಪಾವಳಿ ಸಂಚಿಕೆ)

ಈ ವಲಸೆ ಎಂದರೇನು ? ಇದು ನಿಜವಾಗಿಯೂ ಸಮಸ್ಯೆಯೆ ?

ಇದಕ್ಕೆ ಉತ್ತರವನ್ನು ನಾನು ಹೇಳಹೋಗುವುದಿಲ್ಲ ಇದೇ "ಸಾಹಿತಿ - ಕಲಾವಿದರ ಬಳಗ" ಸಮಾವೇಶವೊಂದನ್ನು ಕರೆದು "ಕನ್ನಡ ಬೆಂಗಳೂರು," "ದ್ವಿಪೌರತ್ವ" "ವರ್ಕ್‌ಪರ್ಮಿಟ್" ಎಂಬ ಘೋಷಣೆಯನ್ನು ಕೊಟ್ಟನಂತರ ನಡೆಸಿದ ಒಂದು ವಿಚಾರ ಸಂಕಿರಣದಲ್ಲಿ ಅವರೇ ಆಹ್ವಾನಿಸಿದ ತಜ್ಞರೆ ಹೇಳಿದ ಮಾತುಗಳಲ್ಲೇ ಉತ್ತರಿಸ ಬಯಸುತ್ತೇನೆ. (ಡಾ|| ಚಿದಾನಂದ ಮೂರ್ತಿಯವರು ಎಲ್ಲವನ್ನೂ ತಿರುವು ಮುರುವಾಗಿ ಮಾಡುತ್ತಿಲ್ಲವೆ? ಮೊದಲು ವಿಚಾರಸಂಕಿರಣ ಮಾಡಿ ಅಭಿಪ್ರಾಯವನ್ನು ದೃಢಗೊಳಿಸಿಕೊಂಡ ಮೇಲೆ ತಾನೆ ಸಮಾವೇಶ. ಮೊದಲು ಕನ್ನಡ ಶಿಕ್ಷಣ ಮಾಧ್ಯಮವನ್ನಾಗಿ, ಆಡಳಿತ ಭಾಷೆಯನ್ನಾಗಿ ನಾವೇ ಒಪ್ಪಿಕೊಂಡ ಮೇಲೆ ತಾನೆ ಬೇರೆಯವರಿಗೆ ಕನ್ನಡದ ಪಾಠ ಹೇಳಲು ಸಾಧ್ಯ; ಅವರ ಪ್ರಕಾರ ಮೊದಲು "ಸ್ವತಂತ್ರ ಕರ್ನಾಟಕದ ಧ್ವನಿ ಎತ್ತ ಬೇಕಾಗುತ್ತದೆ" ಎಂಬ ಆವೇಶಪೂರಿತ ಭಾಷಣ ನಂತರ ತಜ್ಞರೊಂದಿಗೆ ವಿಚಾರವಿನಿಮಯ. ಮೊದಲು ವಲಸೆಯನ್ನು ತಡೆಗಟ್ಟುವುದು ನಂತರ ನಮ್ಮ ಜನರಿಗೆ ಶಿಕ್ಷಣ ನೀಡಿ ಆ ಹುದ್ದೆಗಳನ್ನು ಭರ್ತಿ ಮಾಡುವುದು. ಗಾಡಿಯ ಮುಂದೆ ಕುದುರೆಯನ್ನು ಕಟ್ಟುವುದಕ್ಕೆ ಬದಲಾಗಿ ಗಾಡಿಯ ಹಿಂದೆ ಕುದುರೆಯನ್ನು ಕಟ್ಟಿ ಹೋಗುವ ನೀತಿ !! ಗಾಂಪಗುರುಗಳ ಪುರಾಣವನ್ನು ಅವರು ಆಳವಾಗಿ ಅಭ್ಯಾಸ ಮಾಡಬೇಕೆಂದು ಶಿಫಾರಸು ಮಾಡುವದಕ್ಕೆ ಅಡ್ಡಿಯಿಲ್ಲ ಅಲ್ಲವೆ?

ಬೆಂಗಳೂರು ವಿಶ್ವ ವಿದ್ಯಾನಿಲಯದ ಸಮಾಜ ಶಾಸ್ತ್ರ ವಿಭಾಗದಲ್ಲಿ ಅಧ್ಯಾಪಕರಾದ ಷಣ್ಮುಗಂರವರ ಮಾತು "ವಲಸೆಗಾರರೆಂದರೆ ಯಾರು? "ನಾನು ದೊಡ್ಡಬಳ್ಳಾಪುರದಿಂದ ಬೆಂಗಳೂರಿಗೆ ವಲಸೆ ಬಂದವನು. ಡಾ|| ಚಿದಾನಂದ ಮೂರ್ತಿಗಳೂ ಅಷ್ಟೇ ಇಲ್ಲಿ ವೇದಿಕೆಯ ಮೇಲಿರುವ ಎಲ್ಲರೂ ವಲಸೆ ಬಂದವರೇ ವ್ಯತ್ಯಾಸ ಇಷ್ಟೆ. ಕೆಲವರು ರಾಜ್ಯದ ಗಡಿಯ ಹೊರಗಿನಿಂದ ಬರಬಹುದು, ಉಳಿದವರು ರಾಜ್ಯದ ಒಳಗೇ ಆದರೂ ಹೊರಗಿನ ಪ್ರದೇಶಗಳಿಗಿಂತ ದೂರದ ಪ್ರದೇಶದಿಂದ ಬಂದಿರಬಹುದು. (ಹೊರಗಿನಿಂದ ಬಂದವರು ಶೇ. 5 ಕ್ಕಿಂತ ಹೆಚ್ಚಿಲ್ಲ) ಹಾಗೆ ಬಂದವರು ತಮ್ಮ ಸಾಂಸ್ಕೃತಿಕ ಅನನ್ಯತೆಯನ್ನು ಹುಡುಕುವ, ಅದಕ್ಕಾಗಿ ತಮಿಳು ಸಂಘ, ಕನ್ನಡ ಸಂಘ ಇತ್ಯಾದಿಗಳಿಗಾಗಿ ಪ್ರಯತ್ನಮಾಡುತ್ತಾರೆ ಇದರಲ್ಲಿ ಕನ್ನಡಿಗರು ತಮಿಳರು ಎಂಬ ವ್ಯತ್ಯಾಸ ಏನೂ ಇಲ್ಲ. ಬಂದವರು ಒಂದೇ ಗುಂಪಾಗಿ ಓಡಾಡುವುದರಿಂದ ಕಣ್ಣಿಗೆ ಎದ್ದು ಕಾಣುತ್ತಾರೆ ಅಷ್ಟೆ".

ಇನ್ನು "ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್‌ನಲ್ಲಿ ಪ್ರಾಧ್ಯಾಪಕರಾದ ಆರ್.ಎ. ಪಾಟೀಲರ ಮಾತು: ನಾನು ದೆಹಲಿಯಲ್ಲಿ 15ವರ್ಷಕ್ಕೂ ಹೆಚ್ಚು ಇದ್ದವನು ಮದ್ರಾಸ್‌ನಲ್ಲಿದ್ದು ಬೆಂಗಳೂರಿಗೆ ಬಂದವನು. "ಈ ದ್ವಿಪೌರತ್ವದಿಂದ ಲಾಭವೇನೂ ಆಗುವುದಿಲ್ಲ ಅದಕ್ಕಿಂತ ಹೆಚ್ಚು ಹಾನಿಯೇ ಆಗಬಹುದು. ನಮಗಿರುವ ಸಮಸ್ಯೆ ಪೌರತ್ವದಲ್ಲ.

(6ನೇ ಪುಟ ನೋಡಿ)

ಕನ್ನಡ ಸಾಹಿತಿ - ಕಲಾವಿರ ಬಳಗದ ಡಾ|| ಚಿದಾನಂದ ಮೂರ್ತಿಯವರು, "ಕರ್ನಾಟಕಕ್ಕೆ ಅನ್ಯಭಾಷೀಯರ ವಲಸೆ ತಡೆಯಬೇಕಾದರೆ ಇರುವ ಒಂದೇ ಮಾರ್ಗ, ದ್ವಿಪೌರತ್ವ ಪದ್ಧತಿಯನ್ನು ತರುವುದು" ಎನ್ನುತ್ತಾರೆ. ಬೆಂಗಳೂರಿನಲ್ಲಿ ನಡೆದ ಒಂದು ಸಮಾವೇಶದಲ್ಲಿ ಅವರೇ ಮತ್ತೆ ಹೀಗೆಯೇ ಮುಂದುವರಿದರೆ ಸ್ವತಂತ್ರ ಕರ್ನಾಟಕ ರಾಷ್ಟ್ರ ಧ್ವನಿ ಎತ್ತಬೇಕಾದೀತು" ಎನ್ನುತ್ತಾರೆ.

ಕರ್ನಾಟಕದ ಪೌರಾಡಳಿತ ಸಚಿವ ಲಕ್ಷ್ಮಿಸಾಗರ್‌ರವರು ಕುಸ್ಲಮ್‌ಗಳಲ್ಲಿರುವ ಪರಭಾಷಿಕರಿಗೆ ನಾವೇಕೆ ನೀರು ವಿದ್ಯುತ್ ಒದಗಿಸಲು ಹೆಣಗಬೇಕು ? ಈ ವಲಸೆ ತಡೆಗಟ್ಟಲು 'ವೀಸಾ ಪದ್ಧತಿ' ತರಬೇಕು ಎನ್ನುತ್ತಾರೆ. ಮುಖ್ಯಮಂತ್ರಿ ಹೆಗ್ಗಡೆಯವರೂ ಇದಕ್ಕೆ ಮೆಲ್ಲನೆ ದನಿಗೂಡಿಸುತ್ತಾರೆ. 'ಸರೋಜಿನಿ ಮಹಿಷಿ' ವರದಿಯ ಮಾತನ್ನಾಡುತ್ತಾರೆ.

ಬೆಂಗಳೂರಿನ ಬೆಳವಣಿಗೆಯನ್ನು ಹೆಗ್ಗಡೆ ನಿಲ್ಲಿಸಬಲ್ಲರೇ ?

ಡೆಕ್ಕನ್ ಹೆರಾಲ್ಡ್‌ನಲ್ಲಿ ಒಂದು ಪತ್ರ

ಮಾನ್ಯ ಸಂಪಾದಕರೆ,

ಆಗಸ್ಟ್ ಎರಡರ ಡೆಕ್ಕನ್ ಹೆರಾಲ್ಡ್‌ನಲ್ಲಿ ಪ್ರಕಟವಾಗಿರುವ ನಗರಕ್ಕೆ ನೆಲೆಸಲು ಜನ ಬರುವುದನ್ನು ಸರ್ಕಾರ ತಡೆಯುತ್ತದೆ ಎಂಬ ಸುದ್ದಿಗೆ ಸಂಬಂಧಿಸಿದ ಪತ್ರ ಇದು. ಬೆಂಗಳೂರಿನಲ್ಲಿ ನೆಲೆಸಲು ಗ್ರಾಮೀಣ ಪ್ರದೇಶಗಳಿಂದ ಮತ್ತು ದೇಶದ ಇತರ ಭಾಗಗಳಿಂದ ಬರುತ್ತಿರುವ ಹೊಸ ವಲಸಿಗರಕ್ಕೂ ಇಲ್ಲಿ ಬಂದು ನೆಲೆಸಲು ಕಷ್ಟವಾಗುವಂತೆ ನಾವು ಮಾಡಲಿದ್ದೇವೆ ಎಂದು ಹೆಗ್ಗಡೆ ಹೇಳಿದ್ದಾರೆ. ಇಂಥ ಒಂದು ಹೇಳಿಕೆ ತಮ್ಮ ವ್ಯಕ್ತಿತ್ವಕ್ಕೆ ಮತ್ತು ರಾಜಕೀಯ ಪ್ರಬುದ್ಧತೆಗೆ ಹೆಸರಾಗಿರುವ ನಮ್ಮ ರಾಜ್ಯದ ಮುಖ್ಯ ಮಂತ್ರಿಯವರಿಂದಲೇ ಬಂದುದು ತೀರಾ ದುರದೃಷ್ಟಕರ.

ನಾವು ಬೆಂಗಳೂರಿನಲ್ಲಿ ವಿದೇಶದಲ್ಲಿ ನೆಲೆಸಿರುವ ಭಾರತೀಯರಿಗೆ ನಿವೇಶನಗಳನ್ನು ಕಾದಿರಿಸುವ ಬಗ್ಗೆ, ಮತ್ತು ಹೊರನಾಡ ಭಾರತೀಯರು ಇಲ್ಲಿ ಬಂದ ಕೈಗಾರಿಕೆಗಳನ್ನು, ಸ್ಥಾಪಿಸುವಂತೆ ನಮ್ಮ ಮಂತ್ರಿ ಮಾನ್ಯರುಗಳು ಅವರ ಮನವೊಲಿಸಲು ಪ್ರಯತ್ನಿಸುತ್ತಿದ್ದಾರೆಂಬ ಬಗ್ಗೆ ಸುದ್ದಿ ಕೇಳಿ ಬರುತ್ತಿದೆ, ಈ ವಿದೇಶೀ ಭಾರತೀಯರೆಂಬುವರೇ ಒಂದು ವಿಶಿಷ್ಟ ವರ್ಗವಲ್ಲವೇ ? ನಮ್ಮ ಗ್ರಾಮೀಣ ಪ್ರದೇಶದಿಂದ ಕೇವಲ ಎರಡು ಹೊತ್ತಿನ ಊಟವನ್ನು ಗಳಿಸುವುದಕ್ಕಾಗಿ ದುರಾದೃಷ್ಟವಂತ ಸೋದರರನ್ನು ಈ ವಿದೇಶೀ ಭಾರತೀಯರ ಜೊತೆ ಹೋಲಿಸುವುದು ಸಾಧ್ಯವೇ ?

ಹೆಗ್ಗಡೆಯವರಿಗೆ ತಮ್ಮ ಹೇಳಿಕೆಯ ಅರ್ಥಗಳು ಏನೆಂಬುದು ಅವರಿಗೆ ತಿಳಿದಿಲ್ಲವೆಂದೇನೂ ನನಗೆ ಅನಿಸುವುದಿಲ್ಲ. ಭಾರತದ ಯಾವುದೇ ನಗರಕ್ಕೆ ಅದು ಬೆಂಗಳೂರಿರಲಿ ಬಾಂಬೆಯಿರಲಿ ಜನ ನೆಲೆಸಲು ಬರುವುದಕ್ಕೆ ತಡೆ ಹಾಕಬೇಕೆಂದು ಯೋಚಿಸುವುದು ಕೂಡ ಒಬ್ಬ ಪ್ರಜೆಯ ಸಂವಿಧಾನ ದತ್ತ ಮೂಲಭೂತ ಹಕ್ಕುಗಳ ಮೇಲೆ ಧಾಳಿಯಾಗಿ ಪರಿಣಮಿಸುತ್ತದೆ.

ಇದರ ಜೊತೆಗೆ ಹೆಗ್ಗಡೆಯವರು ತಮಗರಿವಿಲ್ಲದೆಯೇ ತಮ್ಮ ಹೇಳಿಕೆಗಳಿಂದ ಭಾಷಾಂಧರಿಗೆ ಒಳ್ಳೆಯ ಸಾಧನವನ್ನು ಒದಗಿಸಿಕೊಟ್ಟು, ಬೆಂಗಳೂರಿನ ಕಾಸ್ಮೊಪಾಲಿಟನ್ ಲಕ್ಷಣದ ನಾಶಕ್ಕೆ ಕಾರಣವಾಗುತ್ತಾರೆ. ಇದನ್ನು ನೋಡಿದರೆ ಬಾಂಬೆ ಮರಾಠಿಗರಿಗೆ, ಬೆಂಗಳೂರು ಕನ್ನಡಿಗರಿಗೆ, ಮದ್ರಾಸು ತಮಿಳರಿಗೆ ಕಲ್ಕತ್ತ ಬಂಗಾಳಿಗಳಿಗೆ ಸೀಮಿತವಾಗುವ ದಿನ ದೂರವಿಲ್ಲ.

ಈ ವಲಸೆ ಹಳ್ಳಿಗಳಿಂದ ಪಟ್ಟಣಕ್ಕೇ ಏಕಾಗಬೇಕು ? ಅದರ ವಿರುದ್ಧ ದಿಕ್ಕಿನಲ್ಲಿ ಏಕಾಗುವುದಿಲ್ಲ? ಇದಕ್ಕಾಗಿ ನಾವು ನಮ್ಮ ಯೋಜನೆಗಳನ್ನು ರೂಪಿಸುವವರನ್ನ ದೂಷಿಸಬೇಕಾಗುತ್ತದೆ ನಮ್ಮನ್ನ ಸುತ್ತುವರೆದಿರುವ ಈ ಗೊಂದಲಕ್ಕೆ ಅವರನ್ನು ಹೊಣೆ ಮಾಡಬೇಕಾಗುತ್ತದೆ. ದೂರದೃಷ್ಟಿಯ ಅಭಾವ, ಆದ್ಯತೆಗಳ ಏರುಪೇರು, ತಪ್ಪು ದಿಕ್ಕು ಇವು ನಮ್ಮ ಸರ್ಕಾರದ ಆರ್ಥಿಕ ನೀತಿಯ ಲಕ್ಷಣಗಳು. ಇವು ಇದೇ ರೀತಿ ಮುಂದುವರಿಯುವವರೆಗೂ ನಗರಗಳತ್ತ ವಲಸೆ ಅನಿವಾರ್ಯ. ಇದನ್ನು ತಡೆಯುವ ಯಾವುದೇ ಪ್ರಯತ್ನಗಳೂ ಮತ್ತಷ್ಟು ಸಮಸ್ಯೆಗಳನ್ನು ಸೃಷ್ಟಿಸುತ್ತವೆಯೇ ಹೊರತು ಬಗೆ ಹರಿಸುವುದಿಲ್ಲ.

ಹಿಂದಿನ ಮುಖ್ಯಮಂತ್ರಿ ಕೆಂಗಲ್ ಹನುಮಂತಯ್ಯ ನಮ್ಮ ವಿಧಾನಸೌಧದಂತಹ ಭವ್ಯ ಸೌಧವೊಂದನ್ನು ಕಟ್ಟಿಸಲು. ಕಾರಣವಾದರೆ ತಮ್ಮ ಆಡಳಿತಾವಧಿಯ ಹೆಚ್ಚು ಕಾಲ ಅದರ ಸುತ್ತ ಜನರ ಪ್ರವೇಶವನ್ನು ನಿರ್ಬಂಧಿಸುವ ಬೇಲಿಯನ್ನು ಹಾಕಿದ ಅಪೂರ್ವ ಸಾಧನೆ ಗುಂಡೂರಾಯರದೆಂಬ ಜನಪ್ರಿಯ ಮಾತೊಂದಿದೆ. ಅದೇ ರೀತಿ ಮುಂದೆ, ಕೆಂಪೇಗೌಡ ಬೆಂಗಳೂರನ್ನು ನಿರ್ಮಿಸಿದ, ಹೆಗ್ಗಡೆ ಅದರ ಸುತ್ತ, ಬೇಲಿ ಹಾಕಿದ ಮಹಾ ಕಾರ್ಯ ನೆರವೇರಿಸಿದರು ಎಂದು ಹೇಳುವ ಕಾಲ ಬರದಿರಲಿ.

ತಮ್ಮ ವಿಶ್ವಾಸಿ

ಡಿ. ಜಿ. ರಾನಡೆ

ಕಾಫಿಯ ತೋಟಗಳಲ್ಲಿ....

ನದಿ ಮೂಲ, ಋಷಿ ಮೂಲಗಳನ್ನು ಹುಡುಕಬಾರದೆಂಬ ಒಂದು ಮಾತಿದೆ. ಬಹುಶಃ ಹುಡುಕಿದ ನಂತರ ಇದರಿಂದ ನಿರಾಶೆಯಾಗಬಹುದೆಂಬ ಮತ್ತು ಅವುಗಳ ಬಗೆಗಿನ ರೊಮ್ಯಾಂಟಿಕ್ ಕಲ್ಪನೆಗಳು ಭಗ್ನವಾಗಬಹುದೆಂಬ ಅಭಿಪ್ರಾಯ ಇದಕ್ಕೆ ಕಾರಣವಿರಬಹುದು. ಆದರೆ ಮನುಷ್ಯರ ಸ್ಥಳ ಮೂಲವನ್ನು ಕೆದರುತ್ತಾ ಹೋದಂತೆ ಸ್ವಾರಸ್ಯಕರವಾದ, ವರ್ಣಮಯವಾದ ಕಥೆಗಳು ಬಿಚ್ಚಿಕೊಳುತ್ತಾ ಹೋಗುತ್ತದೆ. ಹೀಗೆ ವಲಸೆ ಬಂದವರ ಅನುಭವಗಳು ವೈವಿಧ್ಯಮಯವಾಗಿದ್ದು ಆಯಾ ಕಾಲಘಟ್ಟದ ಆರ್ಥಿಕ, ಸಜಿಮಾಕ ಪರಿಸ್ಥಿತಿಯ ಇಣುಕು ನೋಟವನ್ನು ಒದಗಿಸುತ್ತವೆ. ನೆರೆಯ ತಮಿಳುನಾಡಿನಿಂದ ಬೆಂಗಳೂರಿಗೆ ವಲಸೆ ಬಂದವರೊಬ್ಬರು ತಮ್ಮ ಅನುಭವಗಳನ್ನು ಹೀಗೆ ಹೇಳಿದ್ದಾರೆ.

“ನಾನು ತಮಿಳುನಾಡಿನಿಂದ ಮೊದಲು ಚಿಕ್ಕಂದಿನಲ್ಲಿ ನನ್ನ ಪುಟ್ಟ ಊರನ್ನು ಬಿಟ್ಟು ಮೊದಲ ಸಲ ಕಾಫಿ ತೋಟಕ್ಕೆ ಕೂಲಿ ಮಾಡಲು ಹೋದಾಗಿನ ಅನುಭವವನ್ನು ಹೇಳಬೇಕೆನಿಸುತ್ತದೆ. ಅದು ಸುಮಾರು 1932-33 ನೇ ಇಸವಿ, ನನಗಾಗ 13 ವರ್ಷ ವಯಸ್ಸು. ನನ್ನದು ಬಡ ಕುಟುಂಬ. ಒಮ್ಮೆ ಕಾಫಿ ತೋಟಗಳಿಗೆ ಕೂಲಿಯಾಳುಗಳನ್ನು ಒದಗಿಸುವ ದಲ್ಲಾಳಿಯೊಬ್ಬ ನಮ್ಮೂರಿಗೆ ಬಂದು ಕೂಲಿಯಾಳುಗಳ ತಂಡವೊಂದನ್ನು ಕರೆದೊಯ್ಯುತ್ತಿದ್ದ. ಅವನನ್ನು ಕಂಗಾಣಿ ಎಂದು ಕರೆಯುತ್ತಿದ್ದರು. ದಲ್ಲಾಳಿಗಳು ನೀಲಗಿರಿಯ ತೋಟಗಳಿಗೆ ಮೈಸೂರು, ನಾಗಮಂಗಲ, ಕೇರಳ ಮುಂತಾದ, ದೂರ ದೂರದ ಊರುಗಳಿಂದ ಆಹ್ವಾನ, ದುಡ್ಡಿನ ಹೆಚ್ಚಿನ ಸಂಬಳ

(6 ನೇ ಪುಟ ನೋಡಿ)

ಕೆ. ಜಿ. ಎಫ್. ನಲ್ಲಿ

ಒಮ್ಮೆ ಸಿ. ಪಿ. ಐ. (ಎಂ) ಶಾಸಕ ಕಾಂ. ಟಿ. ಎಸ್. ಮಣಿಯವರೊಂದಿಗೆ ಮಾತನಾಡುತ್ತಿದ್ದಾಗ ಅವರು ಹೇಳಿದ ಸಂಗತಿ. ಸ್ವತಃ ಗಣಿ ಕಾರ್ಮಿಕರಾದ ಇವರ ತಂದೆಯೂ ಗಣಿ ಕಾರ್ಮಿಕರೇ. ಅವರಕಾಲದಲ್ಲಿ ತಮಿಳುನಾಡಿನ ಹಳ್ಳಿಗಳಿಂದ ಬಂದ ಕಾರ್ಮಿಕರು ಇಲ್ಲಿನ ದುಸ್ತರವಾದ ಜೀವನ, ಕಡಿಮೆ ಕೂಲಿ, ಕೆಲಸದ ಸಮಯದಲ್ಲಿ ಆಡಳಿತ ವರ್ಗದ ಕ್ರೂರ ಹಿಂಸೆ ಇವುಗಳನ್ನು ತಾಳಲಾರದೆ ಮತ್ತೆ ಹಿಂದೆ ತೆರಳಲು ಅನೇಕ ಬಾರಿ ಪ್ರಯತ್ನಪಡುತ್ತಿದ್ದರು. ಆಗ ಅವರನ್ನು ತಮ್ಮ ಕ್ರೂರ ಮುಷ್ಟಿಯಲ್ಲಿ ಹಿಡಿದಿಟ್ಟುಕೊಳ್ಳಲು ಬಯಸಿದ ಬ್ರಿಟಿಷ್ ಅಧಿಕಾರಿಗಳು ಕಾರ್ಮಿಕರ ಕೈಗಳಿಗೆ ಕಬ್ಬಿಣದ ಬಳೆಯೊಂದನ್ನು ಹಾಕಿದ್ದರಂತೆ, ಈ ಬಳೆಯಿದ್ದವರೆಲ್ಲರೂ ಬಂಗಾರದ ಗಣಿಯ ಕಾರ್ಮಿಕರು ಎಂಬುದನ್ನು ಗುರುತಿಸಲು (ಈಗ ಹೋಟೆಲುಗಳಲ್ಲಿ ಹಾಕುವುದಿಲ್ಲವೆ ಇದು ಇಂತಹ ಹೋಟೆಲಿನ ಲೋಟ, ಪಾತ್ರೆ ಎಂದು) ಇವರು ಓಡಿ ಹೋಗುವ ದಾರಿಯಲ್ಲಿನ ಪೋಲೀಸ್ ಠಾಣೆಗಳು ಈ ರೀತಿ ಬಳೆಯಿದ್ದವರು ಯಾರೇ ಆಗಲಿ ಅವರನ್ನು ಹಿಡಿದು ಆಡಳಿತ ವರ್ಗಕ್ಕೆ ಒಪ್ಪಿಸಿ ಇನಾಮು ಪಡೆಯುತ್ತಿದ್ದರಂತೆ.

ಒಮ್ಮೆ ಅಸ್ಸಾಂ ಚಹಾ ತೋಟಗಳಲ್ಲಿ ಕಾರ್ಮಿಕರು ಊರಿಗೆ ಹೊರಡಲು ಮುಷ್ಕರ ಹೂಡಿದಂತೆ, ಬಂಗಾರದ ಗಣಿಯಲ್ಲಿನ ಎಲ್ಲಾ ಕಾರ್ಮಿಕರನ್ನು ಖಾಯಂ ಮಾಡಲು ಸಹಿಬಾರದ ಅವರ ಬೆರಳ ಗುರುತನ್ನು ಪಡೆಯಲು ಪ್ರಯತ್ನಿಸಿದಾಗ ಕಾರ್ಮಿಕರೆಲ್ಲರೂ ಮುಷ್ಕರ ಹೂಡಿದರಂತೆ. ನಮ್ಮನ್ನು ಆಡಳಿತ ವರ್ಗ ಈ ಗಣಿ ಕೆಲಸಕ್ಕೆ ಕಟ್ಟಿಹಾಕಲು ಪ್ರಯತ್ನಿಸುತ್ತಿದೆ. ನಾವು ಇಲ್ಲಿರಬಯಸುವವನಲ್ಲ ಊರಿಗೆ ಹೋಗುತ್ತೇವೆ. ನಮ್ಮ ಬೆರಳ ಗುರುತನ್ನು ಪಡೆಯಬಾರದು ಎಂದು.ಒಂದು ಗಣಿಯಲ್ಲಿ ಆರಂಭವಾಗಿ ಎಲ್ಲಾ ಗಣಿಗಳಿಗೆ ಹರಡಿದ ಈ ಮುಷ್ಕರ ಏಳು ದಿನ ನಡೆದು ಬ್ರಿಟಿಷರು ಬೆರಳ ಮುದ್ರೆಯನ್ನು ಪಡೆಯುವುದಿಲ್ಲ ಎಂಬ ಭರವಸೆಯ ಮೇಲೆ ಯಶಸ್ವಿಯಾಗಿ ಕೊನೆಗೊಂಡಿತ್ತು ಇದು ನಡೆದದ್ದು 1930ರ ದಶಕದಲ್ಲಿ.

(ಆಧಾರ: ಜೊರ್ನ್‌ಹೆಟ್ನೆರವರ ಪುಸ್ತಕ Political Economy of Indirect Rule ಪ್ಲಾಂಟೇಷನ್) ಕೂಲಿಗಳ ವಿಷಯದಲ್ಲಂತೂ ಮೈಸೂರು ಸಂಸ್ಥಾನ ಬ್ರಿಟಿಷ್ ಇಂಡಿಯದ ರೀತಿಯಲ್ಲಿಯೇ ತಪ್ಪಿಸಿ ಹೋದ ಆಳುಗಳನ್ನು ಹಿಡಿದು ತರಲು ಅವರ ಮೇಲೆ ಪ್ಲಾಂಟೇಷನ್ ಮಾಲೀಕರ ಮಾಲೀಕತ್ವವನ್ನು ಒಪ್ಪುವಂತೆ ಮಾಡಲು ಕಾನೂನು ಪಾಸು ಮಾಡಿತ್ತು. (ಆಧಾರ ಎಚ್ ಎಲ್. ನಾಗೇಗೌಡರ ಬೆಟ್ಟದಿಂದ ಬಟ್ಟಲಿಗೆ]

ಹೀಗೆ ಆಸೆ ತೋರಿಸಿಕರೆತಂದ ಊರಿಗೆ ಹೋಗಬೇಕು ಎನ್ನುವವರನ್ನು ಬಲವಂತವಾಗಿ ಕಟ್ಟಿ ಹಾಕಿಸಿ ಕೊಂಡು ಇವರನ್ನು ಊಟ ಮುಗಿದ ಮೇಲೆ ಉಂಡ ಎಲೆಯನ್ನು ಒಗೆಯುವಂತೆ ತೆಗೆದು ಒಗೆಯಬೇಕೆನ್ನುವುದು ಯಾವ ನ್ಯಾಯ. ಆಗ ಮನಸ್ಸಿಲ್ಲದೆ ನೆಲೆಸಿನಿಂತ ಈ ಜನವನ್ನನುಸರಿಸಿ ಅವರ ಊರುಗಳಿಂದ ಜನ ಬರುವುದು ಇವರು ಊರಿಗೆ ಮರಳುವುದು ಮತ್ತೆ ಬರುವುದೂ ಇವೆಲ್ಲ ಸಹಜವಾದ ಸಾಮಾಜಿಕ ಕ್ರಿಯೆಗಳು.

“ಹುಟ್ಟೂರಿಗೆ ಮರಳಲು ಬಿಡಲಿಲ್ಲ”

ಇಸ್ವಿ 1921. ದೇಶಾದ್ಯಂತ ಬ್ರಿಟಿಷ್ ಸಾಮ್ರಾಜ್ಯಶಾಹಿಗಳ ವಿರುದ್ಧ ಅಸಹಕಾರದ ಅಲೆಗಳು ಅಪ್ಪಳಿಸುತ್ತಿದ್ದ ಸಮಯ. ಅಸ್ಸಾಂನ ಬ್ರಿಟಿಷ್ ಚಹಾ ತೋಟಗಳಲ್ಲಿ ದುಡಿಯುತ್ತಿದ್ದ ಕೂಲಿಗಾರರು ಸಾಮೂಹಿಕವಾಗಿ ಕೆಲಸದಿಂದ ಗೈರುಹಾಜರಾಗಲು ನಿರ್ಧರಿಸಿದರು. ಮಾತ್ರವಲ್ಲ, ಮತ್ತೆಂದೂ ಆ ನರಕಕ್ಕೆ ವಾಪಸಾಗಬಾರದೆಂದು ಸಾವಿರಾರು ಮೈಲುಗಳ ದೂರದ ತಮ್ಮ ಊರುಗಳಿಗೆ ಹಿಂತೆರಳಲಾರಂಭಿಸಿದರು. ಹೀಗೆ ಹೊರಟ ಎಂಟು ಸಾವಿರ ಕೂಲಿಗಾರರಿಗೆ ಕಾದಿತ್ತು ಕ್ರೂರ ಚಿತ್ರಹಿಂಸೆ.

ಕಲ್ಕತ್ತೆಯಲ್ಲಿ ಅವರಿಗೆ ರೈಲು ಟಿಕೆಟ್ ಕೊಡಬಾರದೆಂದು ಬ್ರಿಟಿಷ್ ರೈಲ್ವೆ ಅಧಿಕಾರಿಗಳಿಗೆ ಹೇಳಲಾಯಿತು. ಕೂಲಿಗಾರರು ನಡೆದೇ ಹೋಗಲು ನಿರ್ಧರಿಸಿದರು. ಕೊನೆಗೆ ಹೇಗೋ ಕಲ್ಕತ್ತೆಯ ಮೇಯರ್ ಹಾಗೂ ಪ್ರಸಿದ್ಧ ರಾಜಕೀಯ ಮುಖಂಡ ಸೆನ್‌ಗುಪ್ತಾರ ಮಧ್ಯಪ್ರವೇಶದಿಂದ ಟಿಕೇಟುಗಳು ದೊರೆತವು. ಆದರೆ ರೈಲು ಚಾಂದ್‌ಪುರ ತಲುಪುವಷ್ಟರಲ್ಲಿ ಖಂದಪುರ್ ಜಿಲ್ಲಾ ಮ್ಯಾಜಿಸ್ಟ್ರೇಟರ ಆಣತಿ ಪ್ರಕಾರ ಒಂದು ಸಾವಿರ ಕೂಲಿಗಾರರ ಒಂದು ತಂಡವನ್ನೂ ಬಂಧಿಸಿ ಒಂದು ರಾತ್ರಿ ಕೂಡಿ ಹಾಕಲಾಯಿತು. ಮರುದಿನವಷ್ಟೆ ಅವರನ್ನು ಬಿಡುಗಡೆ ಮಾಡಲಾಯಿತು. ಈ ನಡುವೆ ಕೆಲಸಕ್ಕೆ ಹಿಂದಿರುಗುವಂತೆ ಪೋಲೀಸರ ಮೂಲಕ ಕಿರುಕುಳ. ದಾರಿಯಲ್ಲೇ ಕಾಲರಾದಿಂದ, ಹಸಿವಿನಿಂದ, ಶೀತ [illegible]ಲಿಕೆಯಿಂದ ಅದೆಷ್ಟೋ ಜನ ಕೊನೆಯುಸಿರೆಳೆದರು.

ಮೂರು ಸಾವಿರ ಕೂಲಿಗಾರರ ಇನ್ನೊಂದು ತಂಡವನ್ನು ಬಂಧಿಸಿ ಈ ರೀತಿ ಪೋಲೀಸ ಮೂಲಕ ಪುಸಲಾಯಿಸಲು, ಬೆದರಿಸಲು ಪ್ರಯತ್ನಿಸಲಾಯಿತು. ಇವು ಯಾವುದೂ ಫಲಕಾರಿಯಾಗಲಿಲ್ಲ. ಕೊನೆಗೆ ಮಧ್ಯರಾತ್ರಿ ಕೂಲಿಗಾರರೆಲ್ಲಾ ಗಾಢನಿದ್ರೆಯಲ್ಲಿದ್ದಾಗ ಬ್ರಿಟಿಷ್ ಸೇನಾಧಿಕಾರಿಗಳ ನೇತೃತ್ವದಲ್ಲಿ ಗೂರ್ಖಾ ಸೈನಿಕರನ್ನು ಛೂ ಬಿಡಲಾಯಿತು;ಮುದುಕರು, ಹೆಂಗಸರು, ಹಸುಳೆಗಳೆನ್ನದೆ ಬಾಯೊನೆಟ್‌ಗಳಿಂದ ತಿವಿಲಾಯಿತು. ಹೆಣಗಳನ್ನು ನದಿಗೆಸೆಯಲಾಯಿತು.

19ನೆಯ ಶತಮಾನದ ಉತ್ತರು

[6 ನೇ ಪುಟ ನೋಡಿ

ಯಾತಕ್ಕೆ, ಎಂದಿನಿಂದ ಈ ವಲಸೆ ?

ನಮ್ಮ ರಾಜ್ಯಕ್ಕೆ ವಲಸೆ ಬರಲಾರಂಭಿಸಿದುದು ನೂರಾರು ವರ್ಷಗಳ ಹಿಂದೆ. ಬ್ರಿಟಿಷರ ಆಡಳಿತದಲ್ಲಿ ಒಂದೇ ಬಾರಿಗೆ ಎರಡೆರಡು ರೀತಿಯ ಪರಿಣಾಮ ನಮ್ಮ ದೇಶದ ಮೇಲಾಯಿತು. ಬ್ರಿಟಿಷರು ತಂದು ಭಾರತದ ಮೇಲೆ ಹೇರಿದ ವಸ್ತ್ರ ಮತ್ತಿತರ ವಸ್ತ್ರಗಳಿಂದ ಇಲ್ಲಿನ ನೇಕಾರರು, ಕಮ್ಮಾರರು, ಚಮ್ಮಾರರು ಮೊದಲಾದ ಅನೇಕರು ಕೆಲಸ ಕಳೆದುಕೊಂಡು ಕೃಷಿಕಾರ್ಮಿಕರಾದರು, ಬಡ ರೈತರಾದರು. ಇದರಿಂದ ರೈತರಿಗೆ ಬೇಕಾದ ವಸ್ತ್ರಗಳನ್ನು ಆಯಗಾರರಿಗೆ (ಕುಶಲ ಕರ್ಮಿಗಳಿಗೆ) ಭತ್ತ, ರಾಗಿ, ಜೋಳ ನೀಡಿ ಪಡೆಯುತ್ತಿದ್ದುದಕ್ಕೆ ಬದಲಾಗಿ ಹಣವನ್ನು ನೀಡಬೇಕಾದುದರಿಂದ ಹಣದ ಬೆಳೆಗಳಾದ ಹತ್ತಿ, ಸಾಂಬಾರ ಪದಾರ್ಥಗಳನ್ನು ಬೆಳೆಯಬೇಕಾಯಿತು. ಬ್ರಿಟನ್ನಿನ ಕೈಗಾರಿಕಾ ಮಾಲೀಕರು ಬೆಳೆಗಳಿಗೆ ಬಹಳ ಕಡಿಮೆ ನೀಡಿದ್ದರಿಂದ, ಅದು ಸಾಲದೆಂಬಂತೆ ಹೆಚ್ಚು ಭೂಕಂದಾಯವನ್ನು ಹೇರಿ ಅದನ್ನೂ ಹಣದಲ್ಲಿಯೇ ಪಾವತಿಮಾಡಬೇಕೆಂದು ವಿಧಿಸಿದ್ದರಿಂದ–ಹೀಗೆ ವ್ಯವಹಾರದ ಈ ನಾಣ್ಯೀಕರಣದಿಂದ ರೈತರು ಸಾಲ ಸೋಲಗಳಿಗೆ ತುತ್ತಾಗಬೇಕಾಯಿತು. ಜಮೀನು ಕಳೆದುಕೊಂಡು ಕೃಷಿಕಾರ್ಮಿಕರಾದವರೂ ಕೆಲವರು; ಜಮೀನಿದ್ದರೂ ಅದರಿಂದ ಬರುವ ಉತ್ಪತ್ತಿ ಸಾಲದೆ ಬೇರೆ ಆದಾಯ ಮೂಲವನ್ನು ಹುಡುಕಿ ಹೊರಟವರು ಹಲವರು.

ದೇಶದ ಅನೇಕ ಕಡೆಗಳಲ್ಲಿ ಈ ಕ್ರಿಯೆ ಆರಂಭವಾಗುತ್ತಿದ್ದಂತೆಯೇ ಕೆಲವೇ ಕಡೆಗಳಲ್ಲಿ ಸೀಮಿತವಾಗಿ ರೈಲ್ವೆ ಮಾರ್ಗಗಳನ್ನು ಕೆಲವು ಹತ್ತಿ ಗಿರಣಿ, ಸಣಬು, ನೀಲಿಯ ಉದ್ಯಮಗಳನ್ನು ಜೊತೆಗೆ ಕಾಫಿ ಟೀ, ನೀಲಿಯ ಪ್ಲಾಂಟೇಷನ್‌ಗಳನ್ನು ಆರಂಭಿಸಲಾಯಿತು. ಈ ಪ್ರದೇಶಗಳಲ್ಲಿ ಈ ಕೆಲಸಗಳನ್ನು ನಿರ್ವಹಿಸಲು ಅವಶ್ಯಕವಾದ ತರಬೇತಿಯುಳ್ಳ ಕೆಲಸಗಾರರಿಲ್ಲ. ಇಂತಹ ಪರಿಸ್ಥಿತಿಯಲ್ಲಿ ದೇಶದ ಎಲ್ಲಾ ಕಡೆ ದಾರಿದ್ರ್ಯ ಕೆಲಸದ ಅಭಾವ, ಕೆಲವು ಕಡೆ ಕೆಲಸಗಾರರಿಗೆ ಅಭಾವವಾದಾಗ ಏನಾಗುತ್ತದೆ? ಬಂಡವಾಳ ಹೂಡಿ ಕೈಗಾರಿಗಕೆಳನ್ನು ಆರಂಭಿಸಿದ ಮಾಲೀಕರು ಅವರು ಬ್ರಿಟಿಷರಲ್ಲಿ, ಭಾರತೀಯರಿರಲಿ, ಕೆಲಸಗಾರರನ್ನು ಹುಡುಕಿ ಆದಷ್ಟು ಅಗ್ಗವಾಗಿ ನೇಮಿಸಿಕೊಂಡು ಬರಲು ಗುತ್ತಿಗೇದಾರರನ್ನು ಅಟ್ಟಿದರು. ಆಗ ಎಲ್ಲಿ ಕೃಷಿಯ, ಕುಶಲ ಕರ್ಮಿಗಳ ನಾಶ ತೀವ್ರವಾಗಿತ್ತೊ ಅಲ್ಲಿಯೇ ಹೆಚ್ಚು ಜನ ಬಹಳ ಅಗ್ಗವಾಗಿ ದೊರೆತದ್ದು. ಅಂತಹ ಸಮಯದಲ್ಲಿ ಬಾಂಬೆ, ಅಹಮದಾಬಾದ್, ಮದ್ರಾಸ್‌ಗಳು ಕಲ್ಕತ್ತಾಗಳು ಕೈಗಾರಿಕೆಗಳ ಕೇಂದ್ರಗಳಾಗಿ ಬೆಳೆದವು. ಆದರೆ ಮೈಸೂರು ಸಂಸ್ಥಾನದಲ್ಲಿ ಕಾರ್ಮಿಕರು ಲಭ್ಯವಾಗಲಿಲ್ಲ, ಏಕೆಂದರೆ ಇಲ್ಲಿಯ ಕೃಷಿಯ ಮೇಲೆ, ಬ್ರಿಟಿಷರ ವಾಣಿಜ್ಯದ ಪ್ರಭಾವ ತೀವ್ರವಾಗಿ ಆಗಲಿಲ್ಲ. ಆದರೆ ತೀವ್ರವಾಗಿ ಮೊಟ್ಟಮೊದಲು ಬಂಡವಾಳಶಾಹಿಯ ಶೋಷಣೆಯ ಫಲವನ್ನುಂಡ ದ.ಕನ್ನಡ ಜಿಲ್ಲೆಯಿಂದ, ಉತ್ತರ ಕರ್ನಾಟಕದಿಂದ ಅಂದು ತೀವ್ರವಾಗಿ ಬೆಳೆಯುತ್ತಿದ್ದ ಬಾಂಬೆ ಪೂನಾ, ಅಹಮದಾಬಾದ್‌ಗಳಿಗೆ ಜನ ವಲಸೆ ಹೋಗಲಾರಂಭಿದರು. ಇದರ ಫಲವಾಗಿ ಕಲ್ಕತ್ತಾದಲ್ಲಿ ಕೇವಲ 40 ಭಾಗ ಮಾತ್ರ ಬಂಗಾಲಿಗಳು ಉಳಿದವರು ದೇಶದ ಉಳಿದ ಭಾಗದಿಂದ ಬಂದ ಅನೇಕ ಭಾಷೆಗಳ ಜನರು. ಇಂದಿಗೂ ಅಲ್ಲಿಗೆ ವಲಸೆ ಬರುತ್ತಿರುವವರು ಬಿಹಾರಿಗಳು. ಹಾಗೂ ಬಾಂಗ್ಲಾ ದೇಶಿಯರು ಇತ್ಯಾದಿ. ಅದೇ ರೀತಿಯಲ್ಲಿ ಇಂದಿಗೂ ದ. ಕನ್ನಡ ಜನ, ಉತ್ತರ ಕರ್ನಾಟಕದ ಜನಕ್ಕೆ ಮೊದಲು ಯೋಚನೆ ಬರುವುದು ತಮ್ಮ ನೆಂಟರೂ ಇಷ್ಟರೋ ಈಗಾಗಲೇ ಹೋಗಿ ನೆಲೆಸಿರುವ ಮುಂಬಯಿಯ ಬಗ್ಗೆಯೇ. ?

ಆದರೆ ಭಾರತ ಸ್ವತಂತ್ರವಾದ ಮೇಲೂ ಈ ದಾರಿದ್ರೀಕರಣ ಭೂಮಿ ಕಳೆದುಕೊಂಡು ಉದ್ಯೋಗಗಳನ್ನರಸುವ ಕರುಳು ಕತ್ತರಿಸುವ ಕೆಲಸ ಸಾಗುತ್ತಲೇ ಇದೆ. ಆದರಿಂದಾಗಿ ನಿಧಾನವಾಗಿ ಈ ಕ್ರಿಯೆಗೊಳಗಾದ ಪ್ರದೇಶಗಳಲ್ಲಿ ಉದ್ಯೋಗಗಳ ಸೃಷ್ಟಿಯಾಗದಿದ್ದಾಗ, ಕೈಗಾರಿಗಳು ಸ್ಥಾಪನೆಯಾಗದಾಗನಿರುದ್ಯೋಗ ಅದರ ಜೊತೆಯಲ್ಲಿಯೇ ಅತೃಪ್ತಿ ಬೆಳೆಯುತ್ತದೆ. ಆಗ ಮಾತ್ರ ಇಲ್ಲಿಯವರೆಗೂ ತಮಗಾಗಿ ದುಡಿದ ಬಡ ಜನರಮೇಲೆ ಬೇರೆ ಭಾಷೆ, ಧರ್ಮ, ಜಾತೀಯತೆಂಬ ಹೆಸರಿನಲ್ಲಿ ಅಸೂಯೆ ಬೆಳೆಯುತ್ತದೆ. ಇದೇ ವೆಂಕಟಸ್ವಾಮಿ ಆಯೋಗಕ್ಕೆ ಹಾಗೂ ಆದರ ವಿರುದ್ಧ ಪ್ರತಿಭಟನೆಗೆ, ಹಿಂದೂ ಮುಸ್ಲಿಂ ಜಗಳಕ್ಕೆ ಕಾರಣವಾಗಿರುವುದು. ಇದೇ ಈಗ "ವಲಸೆ"ಯನ್ನು ನೂರಾರು ವರ್ಷಗಳಿಂದ ಸಾಗಿರುವ ವಲಸೆಯನ್ನು ಒಂದು ದೊಡ್ಡ ಸಮಸ್ಯೆಯಾಗಿ ಕಾಣಲು ಕಾರಣ. ಆದುದರಿಂದ ಹೆಚ್ಚು ಉದ್ಯೋಗಕ್ಕಾಗಿ ಅದನ್ನು ಸೃಷ್ಟಿಸುವ ಯೋಜನೆಗಳಿಗಾಗಿ, ಸಂಪನ್ಮೂಲಗಳಿಗಾಗಿ ಹೋರಾಡಬೇಕೆ ಹೊರತು ಬೇರೊಬ್ಬರ ಮೇಲೆ ಕೆಂಡಕಾರುವುದರಿಂದ ಪ್ರಯೋಜನವಿಲ್ಲ.

' ಅದೊಂದು ನರಕಸದೃಶ ಜೀವನ '

[5ನೇ ಪುಟದಿಂದ]

ಆಸೆ, ತೋರಿಸಿ ಕರೆದೊಯ್ಯುತ್ತಿದ್ದರು. ಆದರೆ ತೋಟದಲ್ಲಿನ ಸ್ಥಿತಿಯಿಂದ ಕೂಲಿಯಾಳುಗಳ ಅವಸ್ಥೆ ಬಾಣಲೆಯಿಂದ ಬೆಂಕಿಯೊಳಗೆ ಬಿದ್ದಂತಾಗುತ್ತಿತ್ತು. 20 ಜನರಿದ್ದ ಕೂಲಿಯಾಳುಗಳ ತಂಡದೊಡನೆ ನಾನೂ ಹೊರಟೆ. ಇತರ ಕೂಲಿಗಳಿಗೆ ಕೊಡುವಂತೆ ಆ ಕಂಗಾಣಿ ನನಗೂ 3 ರೂಪಾಯಿ ಅಡ್ವಾನ್ಸ್ ಕೊಟ್ಟ. ಸರಿ ನಮ್ಮ ತಂಡ ಕಾಡಿನ ಕಾಲುದಾರಿಯಲ್ಲಿ ಪ್ರಯಾಣ ಬೆಳಸಿ ಸುಮಾರು 30 ಮೈಲಿ ನಡೆದು ಸಂಜೆ 5 ಗಂಟೆ ಹೊತ್ತಿಗೆ ತೋಟವನ್ನು ತಲುಪಿತು. ಅದು ಬ್ರಿಟಿಷನೊಬ್ಬನ ತೋಟ, ಆಗಿನ ಕಾಲದಲ್ಲಿ ಬಹುತೇಕ ತೋಟಗಳೆಲ್ಲಾ ಬ್ರಿಟಿಷರದೇ ಆಗಿದ್ದವು.

ತೋಟದ ಇಡೀ ಉಸ್ತುವಾರಿಯನ್ನು ನೋಡಿಕೊಳ್ಳುತ್ತಿದ್ದ ರೈಟರ್ ನಮ್ಮ ಹೆಸರುಗಳನ್ನು ಹಾಜರಿ ಪುಸ್ತಕದಲ್ಲಿ ಬರೆದುಕೊಂಡು ಕಂಗಾಣಿಯ ಜೊತೆ ನಮ್ಮನ್ನು ಕೆಲಸಕ್ಕೆ ಕಳಿಸಿದ. ಕಂಗಾಣಿ ನಮ್ಮನ್ನು ಸುಮಾರು 3 ಕಿಲೋ ಮೀಟರ್ ಕರೆದೊಯ್ದು ಕಾಫಿ ಹಣ್ಣುವನ್ನು ಬಿಡಿಸಬೇಕಾದ ಪ್ರದೇಶವನ್ನು ತೋರಿಸಿದ. ಪ್ರತಿಯೊಂದು ಗಿಡದಲ್ಲಿಯೂ ಒಂದೇ ಒಂದು ಹಣ್ಣನ್ನೂ ಬಿಡದೆ ಕೊಯ್ಯಬೇಕಾಗಿತ್ತು ತಪ್ಪಿದರೆ ಕುದುರೆಯ ಮೇಲೆ ಬರುತ್ತಿದ್ದ ರೈಟರ್ ಹಂಟರ್‌ನಿಂದ ಪ್ರಾಣಿಗಳಿಗೆ ಹೊಡೆಯುವಂತೆ ಹೊಡೆಯುತ್ತಿದ್ದ. ಮಧ್ಯಾಹ್ನ 1 ಗಂಟೆಗೆ ಊಟದ ಬಿಡುವು ಅರ್ಧ ಗಂಟೆ ಮಾತ್ರ ನಾನು ಬೆಳಿಗ್ಗೆ ಬರುವಾಗಲೇ ಜೊತೆಯಲ್ಲಿ ತಂದಿದ್ದ ಗಂಜಿಯನ್ನು ಕುಡಿಯುತ್ತಿದ್ದೆ. ಬಹಳಷ್ಟು ಜನ ಏನನ್ನೂ ತಿನ್ನುತ್ತಿರಲಿಲ್ಲ.

ಅಲ್ಲಿ ಬಿಡಿಸಿದ ಕಾಫಿ ಹಣ್ಣನ್ನು ಅಳೆಯುವ ವಿಧಾನಕ್ಕೆ ಫಸಲ್ ಎಂದು ಕರೆಯುತ್ತಿದ್ದರು ಒಂದು ಫಸಲ್‌ಗೆ ಸುಮಾರು 50 ಕೆ ಜಿ ಆಗುತ್ತಿತ್ತು. ಒಂದು ಫಸಲ್ ಕಾಫಿ ಹಣ್ಣನ್ನು ಕೊಯ್ದರೆ 8 ಆಣೆ ಕೂಲಿ. ಅರ್ಧ ಫಸಲ್‌ಗೆ ನಾಲ್ಕಾಣೆ ಕಾಲು ಫಸಲ್‌ಗಿಂತ ಕಡಿಮೆ ಹಣ್ಣನ್ನು ಯಾವ ಕೂಲಿಯಾಳಾದರೂ ಕೊಯ್ದಿದ್ದರೆ ಅಂದು ಅವನಿಗೆ ಕೂಲಿ ಕೊಡುತ್ತಿರಲಿಲ್ಲ. ಹೀಗಾಗಿ ಹೊಸಬರು ಎಷ್ಟೋ ಜನಕ್ಕೆ ಅನೇಕ ದಿನ ಕೂಲಿ ದೊರೆಯುತ್ತಿರಲಿಲ್ಲ. ಆಗ ಅವರಿಗೆಷ್ಟು ದುಃಖವಾಗಿರಬಹುದು ನೀವೇ ಯೋಚಿಸಿ ?

ಪ್ರತಿ ಭಾನುವಾರ ಕೂಲಿಯ ಬಟವಾಡೆ.ಇಡೀ ವಾರ ದುಡಿದು ಗಳಿಸಿದ ಹಣದಿಂದ ಕೊಂಡು ಕೊಳ್ಳಲು ಸಾಧ್ಯವಾಗುತ್ತಿದ್ದದು ರಂಗೂನ್ ಅಕ್ಕಿ ನುಚ್ಚು ಮತ್ತು ಉಪ್ಪನ್ನು ಮಾತ್ರ ಆದರೆ ಎಷ್ಟೋ ಸಲ ತಮ್ಮ ಜೀವನ ಸಾಗಿಸಲು ಕೂಲಿಯೊಳುಗಳಿಗೆ ವಾರದ ಬಟವಾಡೆ, ಸಾಕಾಗದೆ ಕಂಗಾಣಿಯ ಹತ್ತಿರ ಸಾಲ ತೆಗೆದುಕೊಳ್ಳಬೇಕಾಗುತ್ತಿತ್ತು. ಹೀಗಾಗಿ ಸಾಲದ ಮೊತ್ತ ಬೆಳೆಯುತ್ತಾ ಹೋಗಿ ಅದನ್ನೂ ತೀರಿಸುವ ದಾರಿ ಕಾಣದೆ, ಕೂಲಿಯಾಳುಗಳು ಜೀತದಾಳುಗಳಂತೆ ದುಡಿಯಬೇಕಾಗಿತ್ತು. ತೋಟದ ಕೆಲಸ ಬಿಟ್ಟು ಓಡಿ ಹೋಗುವುದು ಕೂಡ ಸಾಧ್ಯವಾಗುತ್ತಿರಲಿಲ್ಲ. ತೋಟದ ಸುತ್ತಾ ಕೆಲವು ಆಯಕಟ್ಟಿನ ಸ್ಥಳಗಳಲ್ಲಿ ಪಹರೆಯವರನ್ನು ಇರಿಸಲಾಗಿತ್ತು. ಅದನ್ನು ಹೇಗಾದರೂ ಮೀರಿ ತಮ್ಮ ಊರುಗಳಿಗೆ ಓಡಿ ಹೋದವರನ್ನು ಮತ್ತೆ ಪ್ರಾಣಿಗಳಂತೆ ಹಿಡಿದು ತಂದು ಕ್ರೂರವಾಗಿ ಹೊಡೆದು ಮತ್ತೆ ತೋಟದ ಕೆಲಸಕ್ಕೆ ಹಚ್ಚುತ್ತಿದ್ದರು. ಸಾಲಸೆಂಬಂತೆ ಮಲೇರಿಯಾ ನ್ಯುಮೋನಿಯಾಗಳು ಸಾವಿನ ತಾಂಡವ ನೃತ್ಯ ನಡೆಸುತ್ತಿದ್ದವು. ವೈದ್ಯರಿಲ್ಲದ ಚಿಕಿತ್ಸೆಯಿಲ್ಲದೆ ಅನೇಕ ಜನ ಸಾಯುತ್ತಿದ್ದರು. ಅವರ ಸಾವಿನ ಸುದ್ದಿ ಎಷ್ಟೋ ದಿನಗಳ ನಂತರ ಅವರ ಬಂಧುಗಳಿಗೆ ತಿಳಿಯುತ್ತಿತ್ತು. ಕೆಲವು ವೇಳೆ ಅದೂ ತಿಳಿಯುತ್ತಿರಲಿಲ್ಲ.

ಅಂತೂ ಅದೊಂದು ನರಕಸದೃಶ ಜೀವನ. ದಲ್ಲಾಳಿಗಳ ಸವಿ ಮಾತುಗಳಿಗೆ ಮರುಳಾಗಿ ಅವರ ಹಿಂದೆ ನಡೆಯುವ ನೂರಾರು ಕೂಲಿಯಾಳುಗಳು ಬಯಲ ಜೈಲಿನಲ್ಲಿ ಕೈದಿಗಳಂತೆ ದುಡಿಯಬೇಕಾಗಿತ್ತು. ತೋಟದ ಮಾಲೀಕರು ಯಾವಾಗಲಾದರೂ ಕುದುರೆಯ ಮೇಲೆ ಬರುತ್ತಿದ್ದರು. ಅವರ ಹಿಂದೆ ಮುಂದೆ ಹುಲಿಗಳಂಥ ನಾಯಿಗಳು. ಕೂಲಿಯಾಳುಗಳು ತಮ್ಮ ರಕ್ತ ಸುರಿಸಿ ಬೆಳೆಸಿದ ಕಾಫಿ ಗಿಡಗಳಲ್ಲಿ ತೂಗುವ ಕೆಂಪು ಕಾಫಿ ಹಣ್ಣಿನ ಗುಚ್ಚಗಳು, ಕಣ್ಣು ಹಾಯುವವರೆಗೆ ಕಾಣುವ ನಳನಳಿಸುವ ತೋಟವನ್ನೆಲ್ಲಾ ಒಮ್ಮೆ ನೋಡಿ. ರೈಟರ್‌ನಿಗೆ ಇನ್ನೂ ಚೆನ್ನಾಗಿ ಕೂಲಿಗಾರರ ಶ್ರಮ ಹೀರುವ ಸೂಚನೆ ನೀಡಿ ಹೊರಟು ಹೋಗುತ್ತಿದ್ದರು. ಈ ಬಗ್ಗೆ ಹೇಳುತ್ತಾ ಹೋದರೆ ದಿನಗಟ್ಟಲೆ ಹೇಳಬಹುದಾದಷ್ಟು ಅನುಭವಗಳಿವೆ.

– ಉದಯ ಕುಮಾರ್

ಸಮಸ್ಯೆ ಪೌರತ್ವದಲ್ಲ, ಸಂಪನ್ಮೂಲಗಳದು

[4ನೇ ಪುಟದಿಂದ]

1973ರಲ್ಲಿಯೇ ಶಿವಸೇನೆಯ ಬಾಳ ಠಾಕ್ರೆಯವರು Work Permit (ವರ್ಕ್ ಪರ್ಮಿಟ್) ಗಳ ಘೋಷಣೆಯನ್ನು ಮಾಡಿದರು. ಅದನ್ನು ಮಹಾರಾಷ್ಟ್ರದ ಅಂದಿನ ಮುಖ್ಯಮಂತ್ರಿ ವಸಂತದಾದಾ ಪಾಟೀಲರೇ ಖಂಡ ತುಂಡವಾಗಿ ಖಂಡಿಸಿದರು ಎಂದರು.

(ದ್ವಿಪೌರತ್ವವೆಂದರೆ ಇವರ ಪ್ರಕಾರ ಕರ್ನಾಟಕದ ಪ್ರಜೆ ಎಂಬ ಒಂದು ಪೌರತ್ವ ನಂತರ ಭಾರತದ ಪ್ರಜೆ ಎಂಬ ಮತ್ತೊಂದು ಪೌರತ್ವ. ಇದರಿಂದ ರಾಜ್ಯ ದಿಂದ ರಾಜ್ಯಕ್ಕೆ ಹೋಗಬೇಕಾದರೂ ವೀಸಾಪಡೆದು ಅನುಮತಿಗಾಗಿ ಕಾದು ನಂತರವೇ ಹೋಗಬೇಕು. ವರ್ಕ್ ಪರ್ಮಿಟ್ ಎಂದರೆ ಬೇರೆರಾಜ್ಯದಿಂದ ಕೆಲಸಕ್ಕಾಗಿ ಇಲ್ಲಿಗೆ ಬರುವವರು ಇಲ್ಲಿನ ಸರಕಾರದಿಂದ ಪರ್ಮಿಟ್ ಪಡೆದಿರಬೇಕು. ಅದರಲ್ಲಿ ಎಷ್ಟು ವರ್ಷ ಇಲ್ಲಿ ಕೆಲಸಮಾಡಬೇಕು ಎಂಬಲ್ಲೂ ನಮೂದಾಗಿರುತ್ತದೆ. ಆ ಅವಧಿಯ ನಂತರ ಜಾಗ ಖಾಲಿಮಾಡಬೇಕು.)

"ಪಾಟೀಲರು ಇದನ್ನು ಒತ್ತಿ ಹೇಳಿದರು", ಇದು ದ್ವಿಪೌರತ್ವ ಅಥವಾ ವರ್ಕ್ ಪರ್ಮಿಟ್‌ನ ಪ್ರಶ್ನೆಯಲ್ಲ ಇದು ಸಂಪನ್ಮೂಲಗಳ ಪ್ರಶ್ನೆ. ಹೆಚ್ಚು ಸಂಪನ್ಮೂಲಗಳನ್ನು ನಾವು ಕೇಂದ್ರ ಸರಕಾರದ ಬಳಿ ಕೇಳಬೇಕು. ದೆಹಲಿಯ ಅಭಿವೃದ್ಧಿಗಾಗಿ, ಏಷ್ಯಾಡ್‌ಗಾಗಿ ಎಷ್ಟು ಹಣ ವೆಚ್ಚಮಾಡಿದ. ಬೆಳವಣಿಗೆಯಾಗುತ್ತಿರುವ ಬೆಂಗಳೂರು, ಕಲ್ಕತ್ತಾ, ಬಾಂಬೆ, ಮದ್ರಾಸ್‌ಗಳ ಅಭಿವೃದ್ಧಿಗಾಗಿ ಸಂಪನ್ಮೂಲಗಳಿಗಾಗಿ ಕೇಳಬೇಕು ಎಂದ ಅವರು ಮುಂದುವರಿದು "ಈ ರಾಜ್ಯದಿಂದ ಆರಿಸಿಹೋದ ಎಂ. ಪಿ.ಗಳು ಇದನ್ನು ಮಾಡಬೇಕು. ಮಾಡದಿದ್ದರೆ ನಾವು ಅವರನ್ನು ಘಟ್ಟಿಸಿ ಕೇಳಬೇಕು" ಎಂದರು. ಹೊರದು ವಲಸೆ ಎಂಬ ಪ್ರಶ್ನೆಗೆ ಉತ್ತರವಿರುವುದು ವಲಸೆಯನ್ನು ಆದಲ್ಲಿಯೂ ಭಾರತದ ಪ್ರಜೆಗಳಲ್ಲಿ ಭೇದವೆಣಿಸಿ, ಇವರು ಬರಬಹುದು ಇವರು ಬರಬಾರದು ಎಂದು ತಡೆಗಟ್ಟುವುದರಲ್ಲಲ್ಲ. ಅದಕ್ಕೆ ಉತ್ತರ, ಸಂಪನ್ಮೂಲಗಳನ್ನು ಹೆಚ್ಚುಪಡೆಯುವುದು, ಪಡೆಯುವುದಕ್ಕಾಗಿ ಹೋರಾಡುವುದು ಮಾತ್ರ ಅದಕ್ಕೆ ಉತ್ತರವಾದೀತು. ಡಾ|| ಚಿದಾನಂದ ಮೂರ್ತಿ ಪಿ.ವಿ. ನಾರಾಯಣ, ಜಿ.ನಾರಾಯಣರ ಬಳಗಕ್ಕೆ ಅವರದೇ ಮಾತುಗಳಲ್ಲಿ, ಡಾ| ಚಿದಾನಂದ ಮೂರ್ತಿಯವರ ಮಾತುಗಳಲ್ಲಿಯೇ ಹೇಳುವುದಾದರೆ, ಕೇಂದ್ರೀಕೃತ ಸರ್ಕಾರ ಭಾರತಕ್ಕೆ ಸರಿ ಹೊಂದುವುದಿಲ್ಲ. ಆಂತರಿಕ ಸ್ವಾಯತ್ತತೆ ಪರವಾದ ನಿರ್ಣಯಗಳನ್ನು ಸ್ವೀಕರಿಸಿದೆ. ನಮ್ಮ ಗುರಿ ಬಲಿಷ್ಠ ಕರ್ನಾಟಕವನ್ನೊಳಗೊಂಡ ಬಲಿಷ್ಠ ಭಾರತ ಅಂತರಿಕ ಸ್ವಾಯತ್ತತೆಯನ್ನು ಕೊಡುವುದೊಂದೇ ಭಾರತವನ್ನು ಬಲಿಷ್ಠವಾಗಿ ಅಖಂಡವಾಗಿ ಉಳಿಸುವ ಮಾರ್ಗ" ಆದರೆ ಬಲಿಷ್ಠ ಕರ್ನಾಟಕವೆನ್ನುವುದು ಕರ್ನಾಟಕಕ್ಕಾಗಿ ಹೆಚ್ಚು ಸಂಪನ್ಮೂಲಗಳಿಗಾಗಿ, ಹೆಚ್ಚು ಅಧಿಕಾರ ವಿಕೇಂದ್ರಿಕರಣಕ್ಕಾಗಿ ಹೋರಾಡುವ ಮೂಲಕ ಹುಟ್ಟಬೇಕೇ ಹೊರತು ಸಂವಿಧಾನದಲ್ಲಿರುವ, ಚಲನಾ ಸ್ವಾತಂತ್ರ್ಯ–ಭಾರತದಲ್ಲಿ ಎಲ್ಲಿಬೇಕಾದರೂ ಹೋಗುವ, ನೆಲಸುವ ಮೂಲಭೂತ ಸ್ವಾತಂತ್ರ್ಯವನು ಕಸಿದುಕೊಳ್ಳುವುದರಿಂದಲ್ಲ. ಸ್ವತಂತ್ರ ಕರ್ನಾಟಕದ ಮಾತನ್ನಾಡುವುದರಿಂದಲ್ಲ. ಹಾಗೆ ಮಾಡಹೊರಟರೆ ಅವರು ಭಾರತವನ್ನು ಒಡೆದಾಳಬೇಕೆನ್ನುವ ಅಮೇರಿಕನ್ ಪ್ರಭುಗಳ ಕಾರ್ಯಕ್ಕೆ ಸಹಾಯಕರಾಗುತ್ತಾರೆ ಅಷ್ಟೇ!!

– ಜಿ. ಎನ್. ನಾಗರಾಜ್

ಸಮೃದ್ಧಿಯ ಕನಸು ಹೊತ್ತು ವಲಸೆ ಹೋದವರಲ್ಲ

[5ನೇ ಪುಟದಿಂದ]

ಅರ್ಧದಲ್ಲಿ ಬ್ರಿಟಿಷರು ಅಸ್ಸಾಂನಲ್ಲಿ ಟೀ ತೋಟಗಾರಿಕೆ ಆರಂಭಿಸಿದಾಗ ತೋಟ ಕೂಲಿಗಳಾಗಿ ದುಡಿಯಲೆಂದು ಮೋಸ–ವಂಚನೆಗಳಿಗೆ ಬಲಿಯಾಗಿ ಕಾಂಟ್ರಾಕ್ಟ್ ಮೇಲೆ ತರಲ್ಪಟ್ಟ ಸಂಯುಕ್ತ ಪ್ರಾಂತ, ಬಿಹಾರ, ಮಧ್ಯ ಪ್ರಾಂತ ಮದ್ರಾಸ್ ಪ್ರಾಂತಗಳ ಹಳ್ಳಿಗಳ ಭೂಹೀನ ಕಡುಬಡ ಕುಟುಂಬಗಳ ಜನರಿರುವರು. ಬ್ರಿಟಿಷ್ ಪ್ಲಾಂಟರುಗಳ ಒಡೆತ, ಛಡಿಯೇಟು, ಚಿಕ್ಕಾಸು ಕೂಲಿಗೆ ಗೋಣು ಮುರಿಯುವ ದುಡಿಮೆಯಿಂದ ಕಂಗೆಟ್ಟ ಈ ಕೂಲಿಗಳು ತಮ್ಮ ಊರುಗಳಿಗೆ ವಾಪಾಸಾಗಲು ಪ್ರಯತ್ನಿಸಿದಾಗ ಕೆಲಸಗಾರರ ಕಾಂಟ್ರಾಕ್ಟ್ ಭಂಗ ಶಾಸನ ಮತ್ತು ಪೀನಲ್ ಕೋಡ್ ಪ್ರಕಾರ ಶಿಕ್ಷೆಗೆ ಗುರಿಯಾಗುತ್ತಿದ್ದರು !

ಇದಕ್ಕಿಂತಲೂ ಭಯಾನಕವಾಗಿದ್ದದ್ದು ಮಾರಿಷಸ್, ಟ್ರಿನಿಡಾಡ್, ಜಮೈಕಾ, ಬ್ರಿಟಿಷ್ ಗಯಾನಾ ಇತ್ಯಾದಿ ದೇಶಗಳ ಕಬ್ಬಿನ ತೋಟಗಳಲ್ಲಿ, ಸಕ್ಕರೆ ಕಾರ್ಖಾನೆಗಳಲ್ಲಿ ದುಡಿಯಲೆಂದು ಭಾರತದ ಗ್ರಾಮಾಂತರ ಪ್ರದೇಶಗಳ ಭೂಹೀನ ಬಡವರ ರಫ್ತು. ದಲ್ಲಾಳಿಗಳ ಮೋಸಕ್ಕೆ ಬಲಿ ಬಿದ್ದು ಸಾವು ಬಯಸದ, ಒಗ್ಗದ ಹವಾಮಾನದ, ಭಾಷೆ ತಿಳಿಯದ ಪ್ರದೇಶಗಳಲ್ಲಿ ದಿನಕ್ಕೆ 18 ಗಂಟೆ ದುಡಿಯಲು ಹಡಗುಗಳಲ್ಲಿ ತುಂಬಿಸಿ ಕೊಂಡು ಇವರನ್ನು ಒಯ್ಯಲಾಯಿತು. ನಡುವೆ ನೀರು ಪಾಲಾದವರೆಷ್ಟೋ, ಕಾಯಿಲೆಗೆ, ಹಸಿವೆಗೆ ಬಲಿಯಾದವರೆಷ್ಟೋ, ಸಮುದ್ರಕ್ಕೆ ತಳ್ಳಲ್ಪಟ್ಟವರೆಷ್ಟೋ !

ಈ ಕಾರ್ಮಿಕರು ತಾವಾಗಿ ಬಯಸಿ ಸಮೃದ್ಧಿಯ ಕನಸು ಹೊತ್ತು ವಲಸೆ ಹೋದವರಲ್ಲ, ತಮ್ಮ ಹುಟ್ಟೂರುಗಳಿಗೆ ವಾಪಸಾಗಲು ಕೂಡಾ ಅವರನ್ನು ಬಿಡಲಿಲ್ಲ ಎಂಬುದು ಗಮನಿಸಬೇಕಾದ ಸಂಗತಿ. ಶೋಷಿತ ಮತ್ತು ದಲಿತ ವಲಸೆ ಕಾರ್ಮಿಕರ ಜೀವನ ಮತ್ತು ಹೋರಾಟ ಭಾರತೀಯ ಶ್ರಮಜೀವಿಗಳ ಇತಿಹಾಸದ ಬಂತು ಅಭಿನ್ನ ಭಾಗ.

ಆಧಾರ : ಸುಕೋಮಲ್‌ಸೇನ್

– ಕೆ. ವಿ.

ಪ್ರಜಾಸತ್ತಾತ್ಮಕ ಮುನ್ನಡೆ

[7ನೇ ಪುಟದಿಂದ]

ಕೊಟ್ಟು ಎಡರಂಗ ಸರ್ಕಾರದ ವಿರುದ್ಧ ಉಪಯೋಗಿಸಲು ಪ್ರಯತ್ನಿಸುತ್ತಿದೆ. ಇದೇ ರೀತಿ ತ್ರಿಪುರಾದಲ್ಲಿ. ಲಾಲ್‌ಗಾಡೆಂನ ಕೇಂದ್ರ ಸರ್ಕಾರ ಮಾಡಿಕೊಂಡ ಒಪ್ಪಂದ ಇಂತಹ ವಿಚ್ಛಿದ್ರಕಾರಿ ಚಳುವಳಿಕಾರರಿಗೆ ಕೋತಿಗೆ ಹೆಂಡ ಕುಡಿಸಿದಂತಾಗಿದೆ.

ಬಾಬ್ರಿ ಮಸೀದಿ, ರಾಮ ಜನ್ಮ ಭೂಮಿಯ ಪ್ರಸಂಗ ಸೇರಿ ಉತ್ತರ ಭಾರತದ ಹಿಂದಿ ಭಾಷಿಕ ಪ್ರದೇಶಗಳಲ್ಲಿ ತೀವ್ರ ಕೋಮುವಾದಿ ಗಲಭೆಗಳು ಹೆಚ್ಚಾಗುತ್ತಿವೆ. ಶಾ ಬಾನೂ ತೀರ್ಪು, ಇದರ ವಿರುದ್ಧ ಮುಸ್ಲಿಂ ಮೂಲಭೂತವಾದಿಗಳ ಚಳುವಳಿ ಮತ್ತು ಇದಕ್ಕೆ ಕಾಂಗ್ರೆಸ್ (ಐ) ಶರಣಾಗತಿ ಆಳುವ ವರ್ಗಗಳ ಕೋಮುವಾದಿ ರಾಜಕೀಯವನ್ನು ಬಯಲುಪಡಿಸಿದೆ. ಇದಲ್ಲದೆ ಗುಜರಾತಿನ ಕೋಮು ಗಲಭೆಗಳು, ಗೋವಾದಲ್ಲಿ, ಮಹಾರಾಷ್ಟ್ರ, ಕರ್ನಾಟಕಗಳಲ್ಲಿ ಭಾಷೆ–ಗಡಿ ಚಳುವಳಿ ಆತಂಕಕಾರಿ ಬೆಳವಣಿಗೆಗಳು.

ಇಂತಹ ಆತಂಕಕಾರಿ ಬೆಳವಣಿಗೆಗಳ ನಡುವೆಯೂ ಕಾಂಗ್ರೆಸ್ (ಐ) ಏಕ ಪಕ್ಷೀಯ ಆಡಳಿತ ಹೇರುವ ಪ್ರಯತ್ನಕ್ಕೆ ಸವಾಲೊಡ್ಡಿ ಎಡ ಮತ್ತು ಪ್ರಜಾಸತ್ತಾತ್ಮಕ ಚಳುವಳಿ ಮುನ್ನಡೆದಿದೆ. ಪಶ್ಚಿಮ ಬಂಗಾಳದ ಮುನಿಸಿಪಲ್ ಚುನಾವಣೆಗಳಲ್ಲಿ ಎಡರಂಗದ ಭಾರಿ ಜಯ, ಗೂರ್ಖಾಲ್ಯಾಂಡ್ ಮತ್ತು ತ್ರಿಪುರಾ ಉಗ್ರಗಾಮಿಗಳ ವಿರುದ್ಧ ಎಡರಂಗದ ಚಳುವಳಿ ಗಮನಾರ್ಹ ಬೆಳವಣಿಗೆಗಳು. ಎಲ್ಲಾ ಕೇಂದ್ರೀಯ ಟ್ರೇಡ್ ಯೂನಿಯನ್‌ಗಳು ಜಂಟಿಯಾಗಿ ದೇಶದ ಐಕ್ಯತೆ ಮತ್ತು ಕೋಮು ಸೌಹಾರ್ದತೆಯ ಬಗ್ಗೆ ಪ್ರಚಾರ, ವಿಶ್ವಶಾಂತಿಯ ಬಗ್ಗೆ ದಕ್ಷಿಣ ಆಫ್ರಿಕಾ ಬಗ್ಗೆ ನಿರ್ಣಯ ಮಾಡಿರುವುದು ಈ ವರ್ಷದ ಇನ್ನೊಂದು ಗಮನಾರ್ಹ ಸಂಗತಿ. ಬೆಲೆ ಏರಿಕೆ ವಿರುದ್ಧ ಫೆಬ್ರುವರಿ 26 ರಂದು ದೇಶವ್ಯಾಪಿ ಬಂದ್, ಮುಷ್ಕರ, ಕಲಮು 311 ವಿರುದ್ಧ ರಾಜ್ಯ ಸರ್ಕಾರಗಳ ನೌಕರರ ಮುಷ್ಕರ, ಕಂಪ್ಯೂಟರೀಕರಣ ವಿರುದ್ಧ ಚಳುವಳಿ, ಆರ್ಥಿಕ ನೀತಿಯ ಪರಿಣಾಮಗಳ ವಿರುದ್ಧ ದುಡಿಯುವ ಜನರು ಹೋರಾಟಕ್ಕೆ ಅಣಿಯಾಗುತ್ತಿರುವ ಶುಭ ಸೂಚನೆ.

ಭಾರತದ ವಿದೇಶೀ ಆರ್ಥಿಕ ನೀತಿ ಸಾಮ್ರಾಜ್ಯಶಾಹಿಗಳಿಗೆ ಬಾಗಿಲನ್ನು ತೆರೆಯುತ್ತಿದ್ದರೂ ವಿದೇಶಿ ರಾಜಕೀಯ ನೀತಿ ಬಹಳ ಮಟ್ಟಿಗೆ ಸರಿಯಾದ ದಾರಿಯಲ್ಲಿದೆ. ಭಾರತದ ಸುತ್ತ ಹಿಂದೂ ಮಹಾಸಾಗರದಲ್ಲಿ, ಪಾಕಿಸ್ತಾನದಲ್ಲಿ ಶ್ರೀಲಂಕಾದಲ್ಲಿ ಅಮೇರಿಕದ ಸೇನಾ ನೆಲೆ, ಮಿಲಿಟರಿ ಗೂಢಚರ್ಯೆ, ಪಾಕೀಸ್ತಾನಕ್ಕೆ ಆಧುನಿಕ ಶಸ್ತ್ರಾಸ್ತ್ರಗಳ ಹಿನ್ನೆಲೆಯಲ್ಲಿ ಸೋವಿಯತ್ ದೇಶದೊಡನೆ ಮೈತ್ರಿ ಮತ್ತಷ್ಟು ಧೃಡವಾಗಿದೆ.

ಈಗ ತಾನೇ ಮುಗಿದ 1986, ಶಾಂತಿವರ್ಷ.

ಮುಂದಿನ ವರ್ಷಗಳ ಶಾಂತಿ ದಿಗ್ವಿಜಯಕ್ಕೆ ಭದ್ರ ಅಡಿಪಾಯ ಬಿದ್ದ ವರ್ಷ.

ಈ ಶತಮಾನದ ಅಂತ್ಯದೊಳಗೆ ಜಗತ್ತನ್ನು ಅಣ್ವಸ್ತ್ರಗಳಿಂದ ಮುಕ್ತಗೊಳಿಗೊಳಿಸುವ ಕಾಮ್ರೇಡ್ ಗೊರ್ಬಚೆವ್‌ರ ಮೂರು ಘಟ್ಟಗಳ ನಿರ್ದಿಷ್ಟ ಪ್ರಸ್ತಾಪಗಳ ಕೊಡುಗೆಯೊಂದಿಗೆ ಆರಂಭವಾದ ಅಂತರ ರಾಷ್ಟ್ರೀಯ ಶಾಂತಿವರ್ಷ ಶಾಂತಿಯ ಪರವಾಗಿರುವವರಾರು, ಯುದ್ಧ ಬಯಸುವ ಶಕ್ತಿಗಳು ಯಾವುವು ಎನ್ನುವುದನ್ನು ಸ್ಪಷ್ಟವಾಗಿ ತೋರಿಸಿಕೊಟ್ಟಿರುವ ವರ್ಷ. ಅಣುಸ್ಫೋಟ ನಡೆಸುವುದಿಲ್ಲವೆಂದು ತಾನೇ ಹಾಕಿಕೊಂಡ ನಿರ್ಬಂಧ ಮತ್ತೆ-ಮತ್ತೆ ನಾಲ್ಕು ಬಾರಿ ವರ್ಷದ ಅಂತ್ಯದವರೆಗೆ ಮುಂದುವರಿಕೆ, ಜೂನ್‌ನಲ್ಲಿ ವಾರ್ಸಾಕೌಲು ದೇಶಗಳ ಮೂರ್ತ ಪ್ರಸ್ತಾಪಗಳು, ಜುಲೈನಲ್ಲಿ ವ್ಲಾಡಿವೋಸ್ಟಾಕ್ ಸಲಹೆಗಳು, ಯುರೋಪಿನಲ್ಲಿ ಪಾರಂಪರಿಕ ಅಸ್ತ್ರಗಳನ್ನು ತಗ್ಗಿಸುವ ಪ್ರಸ್ತಾಪ, ನವಂಬರ್‌ನಲ್ಲಿ ವಿಯೆನ್ನಾ ಪ್ರಸ್ತಾಪಗಳು ಇದಕ್ಕೆ ಪ್ರತಿಯಾಗಿ ಸಾಮ್ರಾಜ್ಯಶಾಹಿಗಳಿಂದ ಮತ್ತಷ್ಟು ಯುದ್ಧಕೋರತನದ ಪ್ರದರ್ಶನ-ನೆವಾಡಾದಲ್ಲಿ ದೊಡ್ಡ ಅಣುಸ್ಫೋಟ ಸೇರಿದಂತೆ ಹಲವಾರು ಅಣುಸ್ಫೋಟಗಳು, ತಾರಾಸಮರದಲ್ಲಿ ಪಾಶ್ಚಿಮಾತ್ಯ ಹಾಗೂ ಜಪಾನೀ ಬಂಡವಾಳಶಾಹಿಗಳನ್ನು ಒಳಗೊಳ್ಳುವ ಪ್ರಯತ್ನ ಮತ್ತು ಅಂತಿಮವಾಗಿ ಅಕ್ಟೋಬರ್‌ನಲ್ಲಿ ರೆಕ್ಯಾವಿಕ್ ಶೃಂಗಸಭೆಯಲ್ಲಿ ಶಸ್ತ್ರಾಸ್ತ್ರ ಪೈಪೋಟಿಯನ್ನು ಕೊನೆಗೊಳಿಸುವ ಚಾರಿತ್ರಿಕ ಅವಕಾಶವನ್ನು ಉದ್ದೇಶಪೂರ್ವಕವಾಗಿ ನಿಷ್ಫಲಗೊಳಿಸಿದ ರೇಗನ್‌ಗೆ, ವಿಶ್ವದ ಜನತೆಯಿಂದ ತುಚ್ಛೀಕಾರ, SALT-II ಒಪ್ಪಂದವನ್ನು ಮುರಿದಾಗಲಂತೂ ಸರ್ವತ್ರ ಖಂಡನೆ.

ಸೋವಿಯತ್ ಒಕ್ಕೂಟದ ಚೆರ್ನೊಬಿಲ್‌ನ ಅಣುಸ್ಥಾವರದಲ್ಲಿನ ದುರಂತ ಇದಕ್ಕಿಂತ ಹಲವಾರು ಪಟ್ಟು ತೀವ್ರವಾದ ಅಣ್ವಸ್ತ್ರಗಳ ನಿವಾರಣೆಯ ಅಗತ್ಯದತ್ತ ವಿಶ್ವದ ಗಮನ ಸೆಳೆಯಿತು. ಪಾಶ್ಚಿಮಾತ್ಯ ಪತ್ರಿಕೆಗಳು ಅದನ್ನು ಅಪಪ್ರಚಾರಕ್ಕೆ ಬಳಸಲು ಪ್ರಯತ್ನಿಸಿ ಸೋತರು. ಸ್ವೀಡನ್ನಿನ ಪ್ರಧಾನಮಂತ್ರಿ ಓಲೋಫ್ ಪಾಮೆಯವರ ಕೊಲೆ ಶಾಂತಿಪ್ರಿಯ ಶಕ್ತಿಗಳಿಗೊಂದು ಆಘಾತವುಂಟುಮಾಡಿದ ಘಟನೆ.

ರೇಗನ್ ತಾರಾಸಮರಕ್ಕೆ ಬಲವಾಗಿ ಅಂಟಿಕೊಂಡಿದ್ದರೂ ಅಮೇರಿಕಾವೂ ಸೇರಿದಂತೆ ವಿಶ್ವಾದ್ಯಂತ ಶಾಂತಿ ಚಳುವಳಿಗೆ ಸಮಾಜವಾದೀ ದೇಶಗಳ ಪ್ರಾಮಾಣಿಕ ಪ್ರಯತ್ನಗಳಿಂದಾಗಿ ಮತ್ತಷ್ಟು ಬಲ. ಅಮೇರಿಕದಿಂದ ಲಿಬ್ಯಾದ ಮೇಲೆ ಧಾಳಿ, ನಿಕರಾಗುವಾದ ಮೇಲೆ ಧಾಳಿ ಎಸಗುವ ಕಾಂಟ್ರಾಗಳಿಗೆ 100ಮಿಲಿಯ: ಡಾಲರ್ ಹಣ ಹಾಗೂ, ಜೊತೆಗೆ ಇರಾನ್‌ಗೂ ಶಸ್ತ್ರಾಸ್ತ್ರಗಳನ್ನು ಮಾರಿದ ಲಾಭದ 30 ಮಿಲಿಯ ಹಣ. ಇವೆಲ್ಲದರ ಮೇಲೆ ಅಫೀಮು ಕಳ್ಳಸಾಗಾಣಿಕೆಯ ಲಾಭ. ಬಯಲಿಗೆ ಬಂದ ನಿಕರಾಗುವಾ ಹಾಗೂ ಲಿಬ್ಯಾದ ಬಗ್ಗೆ ಸುಳ್ಳು ಮಾಹಿತಿ ಹರಡಿದ ದುಷ್ಕೃತ್ಯ ಮತ್ತು ಇವೆಲ್ಲಕ್ಕೂ ಕಿರೀಟಪ್ರಾಯವಾಗಿ ವರ್ಷ ಕೊನೆಯಾಗುತ್ತಿರುವಂತೆ ಶ್ವೇತಭವನದ ಸುತ್ತ ತುಂಬಿರುವ ಕೊಳಚೆಯನ್ನು ಪದರು ಪದರವಾಗಿ ಹೊರಗೆಡಹುತ್ತಿರುವ 'ಇರಾನ್ ಗೇಟ್'. ಸಾಮ್ರಾಜ್ಯಶಾಹಿಯ ಕರಾಳ ಮುಖಗಳು ವಿಶ್ವದ ಜನತೆಗೆ ಹೆಚ್ಚೆಚ್ಚು ಸ್ಪಷ್ಟವಾಗುತ್ತಿದೆ.

ಇದಕ್ಕೆ ಪ್ರತಿಯಾಗಿ ಸಮಾಜವಾದೀ ದೇಶಗಳ ಕಮ್ಯುನಿಸ್ಟ ಪಕ್ಷಗಳ ಹಾಗೂ ಕಾರ್ಮಿಕ ಪಕ್ಷಗಳ ಚಾರಿತ್ರಿಕ ಅಧಿವೇಶನಗಳು ಈ ವ್ಯವಸ್ಥೆಯ ಅತ್ಯುಚ್ಛ ಮಾನವೀಯ ಸ್ವರೂಪವನ್ನು ಎತ್ತಿತೋರಿಸಿವೆ. ಫೆಬ್ರುವರಿಯಲ್ಲಿ ಅಭಿವೃದ್ಧ ಸಮಾಜವಾದದ ಹೊಸಕಾರ್ಯಕ್ರಮ ಅಂಗೀಕರಿಸಿದ ಸಿ.ಪಿ.ಎಸ್.-ಯು.ನ 27ನೇ ಅಧಿವೇಶನ, ಕ್ಯೂಬಾ ಕಮ್ಯುನಿಸ್ಟ ಪಕ್ಷದ 3ನೇ ಅಧಿವೇಶನ, ಜೆಕೊಸ್ಲೊವಾಕಿಯ, ಬುಲ್ಗಾರಿಯಾ, ಹಾಗೂ ಜರ್ಮನಿ, ಮಂಗೋಲಿಯಾ, ಪೋಲೆಂಡ್ ಹಾಗೂ ವಿಯೆಟ್ನಾಂನ ಆಳುವ ಕಮ್ಯುನಿಸ್ಟ/ಕಾರ್ಮಿಕ ಪಕ್ಷಗಳ ಅಧಿವೇಶನಗಳು ನಡೆದವು. ಬಂಡವಾಳಶಾಹೀ ದೇಶಗಳು ಬಿಕ್ಕಟ್ಟು, ನಿರುದ್ಯೋಗ,ದಾರಿದ್ರ್ಯಗಳ ನಡುವೆ ವಿಜ್ಞಾನವನ್ನು ವಿನಾಶಕ್ಕೆ ಬಳಸುತ್ತಿರುವಾಗ ಅದೇ ವಿಜ್ಞಾನ ಹಾಗೂ ತಂತ್ರಜ್ಞಾನವನ್ನು ಜನತೆಯ ಸರ್ವತೋಮುಖ ಅಭಿವೃದ್ಧಿಗೆ ಬಳಸುವ ಕಾರ್ಯಕ್ರಮಗಳನ್ನು ಹಮ್ಮಿಕೊಂಡ ಅಧಿವೇಶನಗಳಿವು.

ಶಾಂತಿ ಪಾರಿವಾಳಗಳಿಗೆ ಹೊಸ ಗರಿಮೂಡಿ ಬಾನ್ ತುಂಬಾ ಹಾರಾಡಿದ ವರ್ಷ. ಗಿಡುಗಗಳ ಗಡಣ ಇನ್ನೂ ಸೋಲದಿದ್ದರೂ ಹ್ಯಾಪೆಮೋರೆ ಹಾಕಬೇಕಾದ ವರ್ಷ, ತನ್ನ ಮೈಗೆ ಅಂಟಿದ್ದ ಅಸ್ಪೃಷ್ಯ ಕೊಳೆಯನ್ನು ತೊಡೆದು ಹೊಸ ದಿಗಂತಕ್ಕೆ ಜಿಗಿಯಲು ಸಜ್ಜಾಗಿ ನಿಂತ ಸೋವಿಯತ್ ಒಕ್ಕೂಟ ಹಾಗೂ ಸಮಾಜವಾದಿ ಬಣ, ರೋಗಗ್ರಸ್ತ, ದಿಗ್ದಿಗಂತಗಳಲ್ಲಿ ರಕ್ತದೋಕುಳಿಯಾಡುವ ತಾರಾಯುದ್ಧ ಪಿಪಾಸು ಸಾಮ್ರಾಜ್ಯಶಾಹಿಯನ್ನು ಶಾಂತಿಸಮರದಲ್ಲಿ ದಿಟ್ಟತನದಿಂದ ಎದುರಿಸಿದ ವರ್ಷ.

ಅಂತರರಾಷ್ಟ್ರೀಯ

ನಮ್ಮ ನಿಮ್ಮೆಲ್ಲರ ಜೀವ ಜೀವಾಳವಾದ ಶಾಂತಿಯೆಂಬ ಪ್ರಶ್ನೆ ಮೆಕ್ಸಿಕೊದಲ್ಲಿ ಆರು ರಾಷ್ಟ್ರಗಳ, ಹರಾರೆಯಲ್ಲಿ ನೂರು ರಾಷ್ಟ್ರಗಳ, ಕೊನೆಗೆ ದೆಹಲಿ ಘೋಷಣೆಯ ಸಿಡಿಲಿನಂತಹ ಮೊಳಗಿಗೆ ಕಾರಣವಾದ ವರ್ಷ. ಲಿಬಿಯಾ, ನಿಕರಾಗುವಾಗಳಲ್ಲಿ ದ. ಆಫ್ರಿಕಾ, ಲೆಬನಾನ್‌ಗಳಲ್ಲಿ ಸಾಮ್ರಾಜ್ಯಶಾಹಿ ಹಾಗೂ ಮೂರನೇವಿಶ್ವ ಮುಖಾಮುಖಿಯಾದ ವರ್ಷ. ಯಾರು ಮಿತ್ರರು ಯಾರು ಶತ್ರುಗಳೆಂಬುದು ಈ ದೇಶಗಳಿಗೆ ನಿಚ್ಚಳವಾದ ವರ್ಷ.

ತೆರೆದ ಸಮಾಜದ ಬಚ್ಚಿಟ್ಟ ಹೊಲಸು,ಬಂಡವಾಳಶಾಹಿ ಪ್ರಜಾಸತ್ತೆ ಕೊಳೆಯುತ್ತಿರುವ ವಾಸನೆ ವಾಷಿಂಗ್‌ಟನ್‌ನಲ್ಲಿ, ಲಂಡನ್‌ನಲ್ಲಿ ಮೂಗಿಗೆ ರಾಚಿದ ವರ್ಷ. ಶಾಂತಿಯೆಂಬ ಪ್ರಶ್ನೆ ಈ ದೇಶಗಳ ಜನಸಮುದಾಯ ಹಾಗೂ ಅಲ್ಲಿನ ಆಳುವ ಮಿಲಿಟರಿ ಕೈಗಾರಿಕಾ ಗುಂಪುಗಳಿಗೆ ಬಿರುಕು ತಂದಿಟ್ಟ ವರ್ಷ

ಜಿಂಬಾಬ್ವೆಯ ರಾಜಧಾನಿ ಹರಾರೆಯಲ್ಲಿ ಸಪ್ಟೆಂಬರ್‌ನಲ್ಲಿ ನಡೆದ ಅಲಿಪ್ತ ರಾಷ್ಟ್ರಗಳ ಎಂಟನೇ ಶೃಂಗಸಭೆ ಈ ವರ್ಷದ ಇನ್ನೊಂದು ಮಹತ್ವದ ಘಟನೆ ಜಗತ್ತಿನ ವಿಮೋಚನಾ ಹೋರಾಟಗಳಿಗೆ, ವಿಶೇಷವಾಗಿ ವರ್ಣದ್ವೇಷ ನೀತಿಯ ವಿರುದ್ಧ ದಕ್ಷಿಣ ಆಫ್ರಿಕನ್ನರ ಹೋರಾಟಕ್ಕೆ ನವೋತ್ಸಾಹ ತುಂಬಿದ ಸಭೆಯಿದು. ಈ ಸಮಯದಲ್ಲೇ ಪಾನ್-ಅಮ್ ವಿಮಾನವನ್ನು ಅಪಹರಿಸಿ ಕರಾಚಿಯಲ್ಲಿ ಅಮಾಯಕ ಪ್ರಯಾಣಿಕರ ಕೊಲೆ ನಡೆಸಿದ ಸಾಮ್ರಾಜ್ಯಶಾಹೀ-ಬಂಟರ ಭಯೋತ್ಪಾದಕ ಕೃತ್ಯ ನಡೆಯಿತು.

ಅತ್ತ ದಕ್ಷಿಣ ಆಫ್ರಿಕಾದ ವಿಮೋಚನಾ ಹೋರಾಟಗಾರರಿಗೆ ಇದು ವರ್ಣದ್ವೇಷಿಗಳ ತುರ್ತು ಪರಿಸ್ಥಿತಿಯ ಪತ್ರಿಕಾ ನಿರ್ಬಂಧಗಳ ಹಿಂದೆಂದೂ ಇಲ್ಲದಷ್ಟು ದಮನದ ವರ್ಷ. ಅದೇ ರೀತಿ ಅಸಹ್ಯ ದಮನಗಳೆದುರಿಗೆ ವಿಮೋಚನಾ ಆಂದೋಲನ ಹೊಸ ಘಟ್ಟ ತಲುಪಿದ ಹೊಸ ವರ್ಷ ಕೂಡಾ. ಅಲ್ಲೀಗ ಕಾರ್ಮಿಕ ವರ್ಗ ನಿರ್ಣಾಯಕವಾಗಿ ಪಾತ್ರವಹಿಸಲಾರಂಭಿಸಿದೆ. ಈ ದಮನ ಹೋರಾಟಗಳ ನಡುವೆ ದಕ್ಷಿಣ ಆಫ್ರಿಕಾ ಕಮ್ಯುನಿಸ್ಟ ಪಕ್ಷ ಆಗಸ್ಟನಲ್ಲಿ ತನ್ನ 65 ನೇ ವಾರ್ಷಿಕೋತ್ಸವ ಆಚರಿಸಿತು. ಅಕ್ಟೋಬರ್‌ನಲ್ಲಿ ವರ್ಣದ್ವೇಷಿಗಳ ಕುತಂತ್ರವೆಂದು ಶಂಕಿಸಲಾಗಿರುವ ವಿಮಾನ ಅಪಘಾತದಲ್ಲಿ ಮೊಜಾಂಬಿಕ್ ಕ್ರಾಂತಿಕಾರಿ ಮುಖಂಡ ಸಾಮೋರಾ ಮಾರ್ಕೆಲ್‌ಸಾವು ವಿಮೋಚನಾ ಹೋರಾಟಗಾರರು ಎದುರಿಸಬೇಕಾಗಿ ಬಂದ ಆಘಾತ.

ಅಂತರರಾಷ್ಟ್ರೀಯ ವಾಣಿಜ್ಯ ರಂಗದಲ್ಲಿ ಮಲ್ಟಿಫೈಬರ್ ಒಪ್ಪಂದ, ಉರುಗ್ವೆಯ ಜಿ ಎ ಟಿ ಟಿ ಸಭೆಯಲ್ಲಿ ಒತ್ತಡ ಲ್ಯಾಟಿನ್ ಅಮೇರಿಕದ ಪುಟ್ಟ ದೇಶ ಪೆರುವನ್ನು ಸಾಲದ ಬಡ್ಡಿ ತೆರಲಿಲ್ಲ ಎಂಬ ಕಾರಣದ ಮೇಲೆ ಐ ಎಂ ಎಫ್ ನಿಂದ ಅವಮಾನತುಗೊಳಿಸಿ ತೃತೀಯ ಜಗತ್ತಿನ ದೇಶಗಳ ಸುತ್ತ ತನ್ನ ಆರ್ಥಿಕ ಕಬಂಧ ಬಾಹುಗಳನ್ನು ಸಾಮ್ರಾಜ್ಯಶಾಹಿ ಚಾಚುತ್ತಿರುವಾಗ ಇನ್ನೊಂದೆಡೆ ಅವರ ಬೆಂಬಲ ಪಡೆದ ಸರ್ವಾಧಿಕಾರಿಗಳು ಜನತೆಯಿಂದ ಆಘಾತಗಳನ್ನು ಎದುರಿಸಬೇಕಾಗಿ ಬಂದ ವರ್ಷವಿದು.

ಮಾರ್ಕೋಸ್ ಅಧಿಕಾರ ಬಿಟ್ಟು ಓಡಿ ಹೋಗಬೇಕಾಯಿತು. ಅವನ ಬೆಂಬಲಿಗರು ಕೂಡಾ ಇತ್ತೀಚೆಗೆ ಸೋತಿದ್ದಾರೆ. ಚಿಲಿ ಹಾಗೂ ನಮ್ಮ ನೆರೆಹೊರೆಯ ಪಾಕಿಸ್ತಾನ, ಬಂಗ್ಲಾ ದೇಶಗಳಲ್ಲಿ ಪ್ರಜಾಪ್ರಭುತ್ವದ ಮರುಸ್ಥಾಪನೆಗೆ ತೀವ್ರ ಹೋರಾಟಗಳು ನಡೆದವು ನಡೆಯುತ್ತಿವೆ. ಚುನಾವಣೆಯ ನಾಟಕಗಳು ವಿಫಲವಾಗಿವೆ.

○

1986 - ಒಂದು ಹಿನ್ನೋಟ

1986,ಭಾರತಕ್ಕೆ ಗೋರ್ಬಚೇವರ ಭೇಟಿಯ ವರ್ಷವೆಂದು ಎರಕಗೊಂಡಿದೆ. ಅಮೇರಿಕಾದ, ಇತರ ಸಾಮ್ರಾಜ್ಯಶಾಹಿಗಳೊಡನೆ ಪ್ರಣಯ ಕಾತುರತೆ ಇಲ್ಲಿನ ಆಳುವವರ್ಗಕ್ಕೆ ತತ್ಕಾಲಕ್ಕೆ ಕಹಿಯೆನಿಸಿ ಸೋವಿಯತ್ ದೇಶ ಚಾಚಿದ್ದ ಸ್ನೇಹಹಸ್ತವನ್ನು ಮತ್ತಷ್ಟು ಗಟ್ಟಿಯಾಗಿ ಹಿಡಿಯಬೇಕಾಗಿ ಬಂದಿದೆ.

ಶಾಂತಿಯೆಂಬ ಪ್ರಶ್ನೆ, ದೇಶದ ಐಕ್ಯತೆಯೆಂಬ ಪ್ರಶ್ನೆಯಲ್ಲಿ ಕಾರ್ಮಿಕರ, ಇತರ ದುಡಿಯುವ ವರ್ಗದ ಸಂಘಟನೆಗಳು ಶಾಂತಿಗಾಗಿ ರಾಷ್ಟ್ರೀಯ ಚಳುವಳಿ ಸಮಿತಿ ಎಂಬ ಹೆಸರಿನಲ್ಲಿ ಒಳಗೆ ಕೂಡುವ ಪ್ರಯತ್ನ ಮಾಡುತ್ತಿವೆ.

ಉದಾರ ನೀತಿಯ ಕಹಿಫಲಗಳು ಒಮ್ಮೆ ಅಖಿಲ ಭಾರತ ಬಂಧ್‌ನ ರಣಕಹಳೆಗೆ ಕಾರಣವಾಗಿದೆ. ಮುಂದೆ? ಕ್ರಾಂತಿಕಾರಿ ಎಚ್ಚರ ದಿಂದ, ಚಟುವಟಿಕೆಯಿಂದ 1987 ಅನ್ನು ನಿರೀಕ್ಷಿಸೋಣ.

ಹೊಸ ಆರ್ಥಿಕ ನೀತಿ : ರಾಜೀವ ಗಾಂಧಿಯವರ "ದೇಶವನ್ನು 21ನೇ ಶತಮಾನಕ್ಕೆ" ಒಯ್ಯುವ ಹೊಸ ಆರ್ಥಿಕ ನೀತಿ,ಶ್ರೀಸಾಮಾನ್ಯ ಭಾರತೀಯರನ್ನು ಹಿಂಡಿ, ಹಿಪ್ಪೆ ಮಾಡಿ ಭಾರತದ ಗುತ್ತೇದಾರಿಗಳು ಮತ್ತು ವಿದೇಶಿ ಬಹುರಾಷ್ಟ್ರೀಯ ಸಂಸ್ಥೆಗಳ ಕೊಬ್ಬು ಹೆಚ್ಚಿಸುವ ಕೆಲಸವನ್ನು ಸುಂದರವಾಗಿ ಮಾಡತೊಡಗಿದೆ. ಸಾರ್ವಜನಿಕ ಕ್ಷೇತ್ರದ ಉದ್ಯಮಗಳ ಮೇಲಿನ ಧಾಳಿ ಇದರ ಒಂದು ಅಂಗ. ವಿಶ್ವಬ್ಯಾಂಕಿನ ಒತ್ತಡಕ್ಕೆ ಬಲಿಯಾಗಿ ಭಾರತದ ಆರ್ಥಿಕತೆಯನ್ನು ವಿದೇಶಿ ಬಹುರಾಷ್ಟ್ರೀಯ ಸಂಸ್ಥೆಗಳ ಆಕ್ರಮಣಕ್ಕೆ ಒಡ್ಡುತ್ತಿರುವ ನೀತಿಯ ಫಲವಾಗಿ, ಉದಾರ ಆಮದು ನೀತಿಯ ಫಲವಾಗಿ ಭಾರತದ ಬಂಡವಾಳಕ್ಕೆ (ಖಾಸಗಿ ಅಥವಾ ಸಾರ್ವಜನಿಕ) ಅನ್ಯಾಯವಾಗುತ್ತಿದೆ. ದೂರಸಂಪರ್ಕ, ಇಲೆಕ್ಟ್ರಾನಿಕ್ಸ್, ಗೊಬ್ಬರ, ಉಕ್ಕು ಮುಂತಾದ ಕ್ಷೇತ್ರಗಳಲ್ಲೂ ಭಾರತದ ಕೈಗಾರಿಕೆಯನ್ನು ಉಸಿರು ಕಟ್ಟಿಸುವ ಆಮದುಗಳನ್ನು ಬಹುರಾಷ್ಟ್ರೀಯ ಕಂಪನಿಗಳಿಂದ ಮಾಡಲಾಗುತ್ತಿದೆ. ಈ ಪ್ರಮಾಣದ ಆಮದು ಭಾರತದ ಬಂಡವಾಳಗರನ್ನು ಗಾಬರಿಗೊಳಿಸಿದೆ, ಮತ್ತು ಅವರ ಪತ್ರಿಕೆಗಳು ಸರ್ಕಾರದ ಈ ದೇಶ ವಿರೋಧಿ ಕೃತ್ಯಗಳನ್ನು ದೂಷಿಸತೊಡಗಿವೆ. ಘೋರವಾದುದೆಂದರೆ ನಮ್ಮ ದೇಶದ ರಕ್ಷಣೆಗೆ ಸಂಬಂಧಪಟ್ಟ ಕೈಗಾರಿಕೆಗಳನ್ನೂ ವಿದೇಶಿಯರ ರಣಹದ್ದಿನ ದೃಷ್ಟಿಗೆ ಒಡ್ಡಲಾಗಿದೆ. ಅನೇಕ ರಕ್ಷಣಾ ಸಂಶೋಧನಾ ಸಂಸ್ಥೆಗಳಿಗೆ ಅಮೇರಿಕದ ತಂಡ ಭೇಟಿ ನೀಡಿದೆ.

ಆಮದು..ರಫ್ತು ವ್ಯಾಪಾರದಲ್ಲಿನ ಕೊರತೆ 9000ಕೋಟಿ ರೂ.ಗಳಿಗೇರಿದೆ ನಿರುದ್ಯೋಗಿಗಳ ಸಂಖ್ಯೆ 4 ಕೋಟಿ ಮೀರುತ್ತಿದೆ. ಕೊರತೆ ಬಜೆಟ್ ಅಲ್ಲದೆ 2-3 ವಾರಗಳಿಗೊಮ್ಮೆ ಬೇರೆ ಬೇರೆ ರೀತಿಯಲ್ಲಿ ಜೀವನಾವಶ್ಯಕ ಮತ್ತಿತರ ವಸ್ತುಗಳ ಬೆಲೆಗಳನ್ನು ಬೇಕಾಬಿಟ್ಟಿಯಾಗಿ ಏರಿಸುವುದು ಸಾಮಾನ್ಯವಾಗಿದೆ. ಈ ಆರ್ಥಿಕ ನೀತಿಯ ಶಿಶುವಾಗಿ ಉಚ್ಚ ವರ್ಗದವರಿಗೆ ವಿಶಿಷ್ಟ ನವೋದಯ ಸ್ಕೂಲುಗಳು, ಉಳಿದವರಿಗೆ ದೂರ ಶಿಕ್ಷಣ ಎನ್ನುವ ಹೊಸ ಶಿಕ್ಷಣ ನೀತಿ ಬೇರೆ.

ವಿಚ್ಛಿದ್ರಕಾರಿ ಚಳುವಳಿಗಳು : ದೇಶದ ಐಕ್ಯತೆ, ಸಮಗ್ರತೆ ಮತ್ತು ಭದ್ರತೆಗೆ ಅಪಾಯವೊಡ್ಡುವ ವಿಚ್ಛಿದ್ರಕಾರಿ ಚಳುವಳಿಗಳು 86ರಲ್ಲಿ ಗಂಭೀರ ಸ್ವರೂಪ ತಾಳಿವೆ. ಹಿಂದಿನ ವರ್ಷವೇ ಆತಂಕಕಾರಿಯಾಗಿದ್ದ ಪಂಜಾಬು ಮತ್ತು ಅಸ್ಸಾಂಗಳಲ್ಲದೆ ಕಾಶ್ಮೀರ, ಗೋರ್ಖಾಲ್ಯಾಂಡ್, ಮುಂತಾದ ಕಡೆ ಈ ವಿಚ್ಛಿದ್ರಕಾರಿ ಚಳುವಳಿಗಳು ಸಾಮ್ರಾಜ್ಯಶಾಹಿಹಿಯ ನೇರ ಕುಮ್ಮಕ್ಕಿನಿಂದ ಗರಿಗೆದರಿಕೊಂಡಿವೆ. ಹರಿಯಾಣದ ಚುನಾವಣೆಯ ಮೇಲೆ ಒಂದು ಕಣ್ಣಿಟ್ಟು ಪಂಜಾಬ್ ಒಪ್ಪಂದದಂತೆ ಚಂಡೀಘರ್ ವರ್ಗಾವಣೆ ಮುಂತಾದ ಕಲಮುಗಳ ಜಾರಿಯಾಗದಿರುವುದು, ಅಕಾಲಿದಳದ ಒಂದು ಭಾಗದ ಸಂದರ್ಭ ಸಾಧಕತನ, ಅಸ್ಸಾಮಿನಲ್ಲಿ ಅಲ್ಪಸಂಖ್ಯಾತರ ಮೇಲೆ ಅತ್ಯಾಚಾರ, ಅನ್ಯಾಯ ಮುಂದುವರಿದಿವೆ. ಕಾಶ್ಮೀರದಲ್ಲಿ ಕಾಂಗ್ರೆಸ್ (ಐ)-ಜಿ. ಎಂ. ಶಾರವರ ಅಪವಿತ್ರ ಮೈತ್ರಿಕೂಟದ ದುರಾಡಳಿತ ಕೋಮು ಪರಿಸ್ಥಿತಿಯನ್ನು ಪೂರ್ತಿ ಬಿಗಡಾಯಿಸಿದೆ. ಫರೂಕ್-ಕಾಂಗ್ರೆಸ್ (ಐ)ನ ಮೈತ್ರಿ ಸಹ ಕಾಶ್ಮೀರದ ಸಮಸ್ಯೆಗಳಿಗೆ ಪರಿಹಾರವಲ್ಲ. ಗೂರ್ಖಾಲ್ಯಾಂಡ್ ಚಳುವಳಿ, ಈ ವರ್ಷದ ಹೊಸ ಕೊಡುಗೆ. ಕಾಂಗ್ರೆಸ್(ಐ) ಜಿ.ಎನ್.ಎಲ್.ಎಫ್. ಚಳುವಳಿಗೆ ಕುಮ್ಮಕ್ಕು

[6 ನೇ ಪುಟ ನೋಡಿ]

ಭಯೋತ್ಪಾದಕತೆಗೆ ಮದ್ದೇನು ?

(1ನೇ ಪುಟದಿಂದ)

-"ಜನತೆಯ ಐಕ್ಯತೆ ಚಿರಾಯುವಾಗಲಿ" (ಆತಂಕವಾದ್ ಕಾ ಏಕ್ ಇಲಾಜ್- ಜನತಾ ಕೀ ಏಕತಾ ಜಿಂದಾಬಾದ್) ಇತ್ಯಾದಿ ಘೋಷಣೆಗಳನ್ನು ಕೂಗುತ್ತಾ ಹೊರಟ ಮೆರವಣಿಗೆಗೆ ದಾರಿ ಯುದ್ದಕ್ಕೂ ದೊರೆತ ಸ್ವಾಗತ ಅಭೂತ ಪೂರ್ವ. ನೋಡಲು ನಿಂತ ಜನ ಪುಲಕಿತರಾಗಿ ಮೆರವಣಿಗೆ ಸೇರಿ ಕೊಂಡರು. ಕೋಮುಸೌಹಾರ್ದ ಮತ್ತು ರಾಷ್ಟ್ರೀಯ ಐಕ್ಯತೆ ಕಾಪಾಡ ಬೇಕೆಂಬ ಬಲವಾದ ಆಕಾಂಕ್ಷೆ ಬಹು ಸಂಖ್ಯೆಯ ಜನರ ಕಣ್ಣಲ್ಲಿ ಸ್ಪಷ್ಟವಾಗಿ ಅಭಿವ್ಯಕ್ತಗೊಂಡಂತಿತ್ತು.

ಮೆರವಣಿಗೆಯ ನೇತೃತ್ವ ವಹಿಸಿದವರು ನಿವೃತ್ತ ಏರ್‌ಚೀಫ್‌ಮಾರ್ಷಲ್ ಅರ್ಜುನ್ ಸಿಂಗ್ ಮುಂತಾದ ಪ್ರತಿಷ್ಠಿತ ನಾಗರೀಕರು-ಕಲಾವಿದರು, ಲೇಖಕರು, ನ್ಯಾಯಮೂರ್ತಿಗಳು ಅವರ ಹಿಂದೆ ಶಾಲಾ ಸಮವಸ್ತ್ರ ತೊಟ್ಟ ಮಕ್ಕಳು. ನಂತರ ಎಲ್ಲಾ ವಿಭಾಗಗಳ ಜನ.

ಮೆರವಣಿಗೆಯ ನಂತರ ಹಳೇ ದಿಲ್ಲಿಯ ಕೇಂದ್ರದಲ್ಲಿರುವ ಪುರಭವನದಲ್ಲಿ ರ್‍ಯಾಲಿ. ಪುಟ್ಟ ಕೈಗಳು ಕೋಮು ಸೌಹಾರ್ದದ ಸಂದೇಶ ಹೊತ್ತ ಬಲೂನ್‌ಗಳನ್ನು ಹಾರ ಬಿಟ್ಟರು. ಪ್ರಗತಿಪರ ಸಾಂಸ್ಕೃತಿಕ ತಂಡ ಪರ್ಚಮ್, ಶಾಲಾ ಮಕ್ಕಳು, ಕಾಲೇಜು ವಿದ್ಯಾರ್ಥಿನಿಯರಿಂದ ಕೋಮು ಸೌಹಾರ್ದದ ಹಾಡುಗಳು.

ರ್‍ಯಾಲಿಯನ್ನುದ್ದೇಶಿಸಿ ಮಾತನಾಡಿದ ನಿವೃತ್ತ ನ್ಯಾಯ ಮೂರ್ತಿ ರಾಜಿಂದರ್ ಸಾಚಾರ್ ಧರ್ಮ ದೇಶದ ಐಕ್ಯತೆಯ ಆಧಾರವಾಗುವುದು ಸಾಧ್ಯವಿಲ್ಲ, "ಹಿಂದೂ ರಾಷ್ಟ್ರ" ದ ಮಾತನಾಡುವವರು ದೇಶದ ಸಮಗ್ರತೆ ಹಾಗೂ ಐಕ್ಯತೆಗೆ ದ್ರೋಹ ಬಗೆಯುತ್ತಾರೆ ಎಂದು ಒತ್ತಿ ಹೇಳಿದರೆ ಸಿ. ಪಿ. ಐ. (ಎಂ) ನ ಜೋಗಿಂದರ್ ಶರ್ಮಾ ಅಮಿತೋತ್ಸಾಹದ ಈ ಮೆರವಣಿಗೆ ಹಾಗೂ ರ್‍ಯಾಲಿ ಜನ ಜಾಗೃತಗೊಂಡಿದ್ದಾರೆಂದು ಕೋಮುವಾದಿಗಳಿಗೆ ನೀಡಿದ ಎಚ್ಚರಿಕೆ ಎಂದರು. ಜಾಮಿಯ ಮಿಲಿಯಾದ ಮಾಜೀ ಉಪಕುಲಪತಿ ಎ. ಜೆ. ಕಿಡ್ವಾಯಿ ಅಪಾರ ಸಂಖ್ಯೆಯಲ್ಲಿ ಭಾಗವಹಿಸಿದ ಮಕ್ಕಳು ಹಾಗೂ ಯುವಕರು ಜಾತ್ಯತೀತ ವಾತಾವರಣದಲ್ಲಿ ಬೆಳೆಯುವಂತೆ ನೋಡಿಕೊಳ್ಳುವುದು ನಮ್ಮ ಕರ್ತವ್ಯ ಎಂದರು.

ಮೆರವಣಿಗೆಯ ಮೊದಲು ದಿಲ್ಲಿಯಾದ್ಯಂತ ನಡೆದ ಹಲವಾರು ಸಭೆಗಳು, ಹಿಂದಿ, ಉರ್ದು, ಪಂಜಾಬ್ ಹಾಗೂ ಇಂಗ್ಲಿಷ್‌ನಲ್ಲಿ ಹತ್ತುಲಕ್ಷ ಕರಪತ್ರಗಳು, 50 ಸಾವಿರ ಭಿತ್ತಿ ಪತ್ರಗಳ ಮೂಲಕ ಕೋಮುಸೌಹಾರ್ದ ಸಮಿತಿ ತನ್ನ ಬೇಡಿಕೆಗಳನ್ನು ಜನಪ್ರಿಯಗೊಳಿಸಿತ್ತು, ಬೇಡಿಕೆಗಳು ಹೀಗಿವೆ-

1 ರೇಡಿಯೋ, ಟಿ.ವಿ-ಮುಂತಾದ ಸರ್ಕಾರೀ ಒಡೆತನದ ಮಾಧ್ಯಮಗಳು ಜಾತ್ಯಾತೀತ ಹಾಗೂ ಜನವಾದೀ ಮೌಲ್ಯಗಳನ್ನು ಎತ್ತಿ ಹಿಡಿಯಬೇಕು.

2 ರಾಷ್ಟ್ರೀಯ ಸಮಗ್ರತಾ ಮಂಡಳಿ ಅತ್ಯಂತ ಕೆಳಗಿನ ಮಟ್ಟದಿಂದಲೂ ಜನರನ್ನು ಒಳಗೊಳ್ಳುವ ಒಂದು ಸಕ್ರೀಯ ಸಂಸ್ಥೆಯಾಗಬೇಕು. ತಕ್ಷಣ ದಿಲ್ಲಿ ಮಟ್ಟದ ಒಂದು ಘಟಕ ಆರಂಭಿಸಬೇಕು.

3 ನವಂಬರ್ 1984ರ ದಿಲ್ಲಿ ದಂಗೆಗಳನ್ನು ಕುರಿತಾದ ಮಿಶ್ರಾ ಆಯೋಗದ ವರದಿಯನ್ನು ಪ್ರಕಟಿಸಬೇಕು.

4 ದಿಲ್ಲಿ ಆಡಳಿತ ಕೋಮು ಸಂಘಟನೆಗಳ ಹಾಗೂ ಧಾರ್ಮಿಕ "ಸೇನೆ" ಗಳ ಚಟುವಟಿಕೆಗಳ ಮೇಲೆ ಕಟ್ಟುನಿಟ್ಟಾದ ನಿಗಾ ಇಟ್ಟಿರಬೇಕು. ದಂಗೆಗಳು ನಡೆಯದಂತೆ ಪರಿಣಾಮಕಾರೀ ಕ್ರಮ ಕೈಗೊಳ್ಳಬೇಕು.

5 ಧಾರ್ಮಿಕ ಸ್ಥಾನಗಳು, ಮೆರವಣಿಗೆಗಳು ಹಾಗೂ ಸಮಾರಂಭಗಳನ್ನು ಕೋಮು ದ್ವೇಷ ಹರಡಲು ಬಳಸದಂತೆ ಆಡಳಿತ ಗಮನವಿಡಬೇಕು.

6 ಪೂಜಾ ಸ್ಥಳಗಳಲ್ಲಿ ಹಾಗೂ ಧಾರ್ಮಿಕ ಸಮಾರಂಭಗಳಲ್ಲಿ ಧ್ವನಿ ವರ್ಧಕಗಳನ್ನು ಬಳಕೆ ಕಟ್ಟುನಿಟ್ಟಾಗಿ ನಿಯಂತ್ರಿಸಬೇಕು.

ಇಂದಿರಾಗಾಂಧಿಯವರ ಆಪ್ತ ಕಾರ್ಯದರ್ಶಿಗಳಾಗಿದ್ದ ಪಿ. ಎನ್. ಹಕ್ಸರ್, ನ್ಯಾಯಮೂರ್ತಿ ಪೊಟ್ಟಿ ಮುಂತಾದ ನಿವೃತ್ತ ನ್ಯಾಯಾಧೀಶರುಗಳು, ಅರೋರಾ, ಅರ್ಜುನ್ ಸಿಂಗ್ ಮೊದಲಾದ ನಿವೃತ್ತ ಸೇನಾಧಿಕಾರಿಗಳು, ವಿವಾನ್ ಸುಂದರಂ ಮುಂತಾದ ಕಲಾವಿದರು ಹಾಗೆ ವಿವಿಧ ಕ್ಷೇತ್ರಗಳ ಪ್ರತಿಷ್ಠಿತ ನಾಗರಿಕನೊಳಗೊಂಡ ಈ ಕೋಮು ಸೌಹಾರ್ದ ಸಮಿತಿ ದಿಲ್ಲಿ ಹಾಗೂ ದೇಶದ ಇತರೆಡೆ ಇಂತಹ ಇತರ ಕಾರ್ಯಕ್ರಮ ನಡೆಸಲು ನಿರ್ಧಾರಿಸಿದೆ. ಜನತೆಯ ದೃಢ ನಿರ್ಧಾರದ ಪ್ರತಿಕ್ರಮ ಖಂಡಿತವಾಗಿಯೂ ಕೋಮುಆಧಾರದ ಮೇಲೆ ವಿಭಜಿಸುವ ಕೋಮು ಹಿಂಸೆ ಪ್ರಚೋದಿಸಿ ದೇಶದ ಐಕ್ಯತೆ, ಸಮಗ್ರತೆ ಹಾಗೂ ಸಾರ್ವಭೌಮತೆ ನಾಶಮಾಡುವ ಪಾತಕಿಗಳನ್ನು ಸೋಲಿಸುತ್ತದೆ ಎಂದು ದಿಲ್ಲಿಯ ಮೆರವಣಿಗೆ ತೋರಿಸಿ ಕೊಟ್ಟಿದೆ.

"ನಮ್ಮ ಪಕ್ಷದ ಸದಸ್ಯರು ಜನತಾ ಪಕ್ಷಕ್ಕೆ ಸೇರಿಲ್ಲ"

ಕಾಂ. ಎಸ್. ಸೂರ್ಯನಾರಾಯಣ ರಾಜ್ಯ ಸಮಿತಿ ಕಾರ್ಯದರ್ಶಿ ಮಂಡಳಿ ಸದಸ್ಯರು ಈ ಕೆಳಕಂಡ ಹೇಳಿಕೆಯನು ನೀಡಿದ್ದಾರೆ. ಕೋಲಾರ ಜಿಲ್ಲೆಯನ್ನು ಕೃಷ್ಣಮೂರ್ತಿ ಮತ್ತಿಬ್ಬರು ಮಾರ್ಕ್ಸವಾದಿ ಕಮ್ಯೂನಿಸ್ಟ್‌ಪಕ್ಷವನ್ನು ಬಿಟ್ಟು ಜನತಾಪಕ್ಷಕ್ಕೆ ಸೇರಿದ್ದಾರೆಂದು ಜನತಾ ಪಕ್ಷವು ಪ್ರಕಟಿಸಿರುವುದು ಚುನಾವಣೆಯಲ್ಲಿ ಓಟು ಗಳಿಸುವ ಕುತಂತ್ರವಷ್ಟೇ ಕೃಷ್ಣಮೂರ್ತಿ ಮತ್ತು ಮತ್ತಿಬ್ಬರನ್ನು 1985ರಲ್ಲೇ ಪಾರ್ಟಿ ಸದಸ್ಯತ್ವದಿಂದ ತೆಗೆದು ಹಾಕಲಾಗಿತ್ತು. ಆದ್ದರಿಂದ ಅವರು ಈಗ ಪಕ್ಷವನ್ನು ಬಿಡುವ ಪ್ರಶ್ನೆಯೇ ಇಲ್ಲ.

ಪಕ್ಷದ ಬಗ್ಗೆ ಕಾಂಗ್ರೆಸ್ ಐ. ಜಿ. ಆಪಾದನೆ

ಕರ್ನಾಟಕದ ಹೈಕೋರ್ಟಿನ ಮುಂದೆ (ಕಾಂಗ್ರೆಸ್‌ನವರು ತಮ್ಮ ಪಕ್ಷಕ್ಕೆ ಚಿಹ್ನೆ ನೀಡಬೇಕೆಂದು ವಿನಂತಿಸುವಾಗ ಆ ಪಕ್ಷದ ಪ್ರಧಾನ ಕಾರ್ಯದರ್ಶಿ ಹಾಗು ವಕೀಲರಾದ ಎಲ್. ಜಿ ಹಾವನೂರ್ ರವರು ಸಿ. ಪಿ. ಐ. [ಎಂ] ಬಗ್ಗೆ ಈ ಪಕ್ಷಕ್ಕೆ ಕರ್ನಾಟಕದಲ್ಲಿ ಸದಸ್ಯರೇ ಇಲ್ಲ. ಚುನಾಯಿತ ಸದಸ್ಯರಂತೂ ಇಲ್ಲವೇ ಇಲ್ಲ ಎಂದು ವಾದಿಸುವುದಕ್ಕೆ ಪ್ರತ್ಯುತ್ತರವಾಗಿ ಸಿಪಿಐ(ಎಂ) ರಾಜ್ಯ ಸಮಿತಿ ಸದಸ್ಯ ಕೆ. ಆರ್. ನಾಯಕ್ ರವರು ಈ ಕೇಸಿನಲ್ಲಿ ತಾವು ಮಧ್ಯ ಪ್ರವೇಶ ಮಾಡಲು ಅವಕಾಶ ನೀಡಬೇಕೆಂದು ಕೋರಿದ ಅರ್ಜಿಸಲ್ಲಿಸಿದ್ದಾರೆ. ಜಿಲ್ಲಾ ಪರಿಷತ್ ಚುನಾವಣೆಯ ಸಮಯದಲ್ಲಿ ಈ ರೀತಿ ಸುಳ್ಳು ಆಪಾದನೆ ಮಾಡಿರುವುದು ಪಕ್ಷಕ್ಕೆ ಹಾನಿ ಮಾಡಿದಂತಾಗಿದೆಯೆಂದು ವಾದಿಸಿದ್ದಾರೆ.

ಬೀಡಿ ಮುಷ್ಕರ

ಡಿಸೆಂಬರ್ 17ರಂದು ಬುಧವಾರ ಕುಂದಾಪುರದಲ್ಲಿ ಬೀಡಿಕಾರ್ಮಿಕರು ಒಂದು ದಿನದ ಯಶಸ್ವಿ "ಸಾಂಕೇತಿಕ ಮುಷ್ಕರ" ಹಾಗೂ ತಾಲ್ಲೂಕು ಕಛೇರಿಯ ಎದುರು "ಧರಣಿ ಸತ್ಯಾಗ್ರಹ" ನಡೆಸಿ ಕುಂದಾಪುರ ತಾಲ್ಲೂಕು ತಹಸಿಲ್ದಾರವರ ಮುಖಾಂತರ ಕೇಂದ್ರ ಮತ್ತು ರಾಜ್ಯ ಸರಕಾರದ ಕಾರ್ಮಿಕ ಮಂತ್ರಿಯವರಿಗೆ ಮುಖ್ಯ ಬೇಡಿಕೆಗಳನ್ನು ಮನವಿಯೊಂದನ್ನು ಅರ್ಪಿಸಲಾಯಿತು.

300 ಬೀಡಿ ಕಾರ್ಮಿಕರು ಮೆರವಣಿಗೆಯಲ್ಲಿ ತಾಲ್ಲೂಕು ಕಛೇರಿಗೆ ತೆರಳಿದರು. ಕಾರ್ಮಿಕ ಮುಂದಾಳುಗಳಾದ ಕಾಮ್ರೇಡ್ ವಿ.ಮಹಾಬಲ, ಸಿ.ನಾರಾಯಣ, ಕೆ.ಶಂಕರ್ ಮತ್ತು ಅಬ್ರಹಾಂ ಕರ್ಕಡರವರು ಮೆರವಣಿಗೆಯ ನೇತೃತ್ವವನ್ನು ವಹಿಸಿದರು.

ಶಿವಸೇನೆಯ ಹೆಜ್ಜೆಗಳಲ್ಲಿ ಹೆಜ್ಜೆ ಇಡಬೇಡಿ

(1ನೇ ಪುಟದಿಂದ)

ಸಾರ್ವಜನಿಕ ಕೈಗಾರಿಕೆ ಹಾಗೂ ವಾಣಿಜ್ಯ ಉದ್ದಿಮೆಗಳಲ್ಲಿ ಶೇ 80ರಷ್ಟು ಕಾರ್ಮಿಕವರ್ಗ (ಹಾಗೂ ಶೇ 65 ರಷ್ಟು ಅಧಿಕಾರಿ ವರ್ಗ) ಕನ್ನಡಿಗರೇ ಆಗಿರಬೇಕು ಮತ್ತು ಕನ್ನಡದ ಜ್ಞಾನ ಈ ಉದ್ದಿಮೆಗಳಲ್ಲಿನ ಉದ್ಯೋಗ ಭರ್ತಿಗೆ ಷರತ್ತಾಗಿರಬೇಕು. ಈ ಎರಡು ಅಂಶಗಳು ಕೂಡಾ ಭಾರತದ ಏಕತೆಯನ್ನು ಮುಳುಗಿಸುವ, ಭಾರತೀಯ ಪೌರತ್ವದ ಸಮಾನ ಹಕ್ಕುಗಳನ್ನು ನಾಶಮಾಡುವ ಭಾಷಾಂಧ, ಛಿದ್ರಕಾರಿ ಶಿಫಾರಸುಗಳು. ಜನತಾಪಕ್ಷದ ಸರಕಾರ ರಾಷ್ಟ್ರೀಯ ಪಕ್ಷವೆಂದು ಹೇಳಿಕೊಳ್ಳುವ, ಆದ್ದರಿಂದ ದೇಶದ ವಿವಿಧ ರಾಜ್ಯಗಳ ಜನತೆಗೆ ಉತ್ತರಿಸಬೇಕಾದಂತಹ ಪಕ್ಷದ ಸರಕಾರ ಈ ಶಿಫಾರಸುಗಳನ್ನು ಅಂಗೀಕರಿಸುವುದು ಬಹಳ ಆಶ್ಚರ್ಯಕರ.

ಕರ್ನಾಟಕದಲ್ಲಿ ತಮಿಳರು ಮಲೆಯಾಳಿಗಳ ನೂರಾರು ವರ್ಷಗಳಿಂದ ಸುರಿಸಿದ ಬೆವರು ಚಂದವಾದ ರಾಜಾಮಿಲ್ ಬಟ್ಟೆಯಾಗಿ, ಸವಿಯಾದ ಕಾಫಿಯಾಗಿ, ದೇಶಕ್ಕೆ ಬೇಕಾದ ಬಂಗಾರವಾಗಿದೆ. ಇಲ್ಲಿಯವರೆಗೂ ಇವರ ದುಡಿಮೆ ನಮಗೆಬೇಕು, ಇಂದು ಅವರು ನಮಗೆ ಬೇಡವೆಂದರೆ ಹೇಗೆ ಸಾಧ್ಯ ?

ಬಲವಾದ ಕೇಂದ್ರವನ್ನು ಕಟ್ಟುವ ಹೆಸರಿನಲ್ಲಿ ರಾಜ್ಯಗಳ ಸ್ವಾಯತ್ತತೆಯನ್ನು ದಮನ ಮಾಡಲು ಪ್ರಯತ್ನಿಸುತ್ತಿರುವ ಭಾರತ ಒಕ್ಕೂಟದ ಕೇಂದ್ರ ಸರಕಾರ ಮತ್ತು ಅದರ ಸರ್ವಾಧಿಕಾರಿ ಆಡಳಿತ ಎಸಗುತ್ತಿರುವ ಅನ್ಯಾಯ ಅಸಮಾನತೆಗಳ ವಿರುದ್ಧ ಬೇರೆ ಬೇರೆ ರಾಜ್ಯಗಳ ಹಾಗೂ ಜನರ ಜೀವಂತ ಹಿತಗಳ ರಕ್ಷಣೆ ಮಾಡುವುದು ಬೇರೆ. ಶೇ 80ರಷ್ಟು ಕೋಟಾ ಥಿಯರಿಯನ್ನು ಕಾನೂನುಗಳನ್ನಾಗಿ ಮಾಡುವ ಅಪಾಯಕಾರಿ ಪ್ರವೃತ್ತಿಯೇ ಬೇರೆ. ಯಾವುನಾದರೊಬ್ಬ ತಲೆ ಸಮವಿರುವ ವ್ಯಕ್ತಿ ಬೇರೆ ಬೇರೆ ರಾಜ್ಯಗಳಲ್ಲಿ ಸ್ಥಾಪಿಸಲ್ಪಡುವ ಆಧುನಿಕ ಕಾರ್ಖಾನೆಗಳಿಗೆ ಶೇ 80ರಷ್ಟು ಅವಶ್ಯವಾದ ಕೌಶಲ್ಯ ಪಡೆದ ಸ್ಥಳೀಯ ಜನರನ್ನು ಕೊಡಬಹುದೆಂದು ಹೇಳಲು ಸಾಧ್ಯವೆ ? ಕುಶಲ ಕೆಲಸವಲ್ಲದ, ಕೇವಲ ಕೂಲಿ ಕೆಲಸಗಳಿಗೆ ಮೀಸಲಾತಿ ತರುತ್ತೇನೆನ್ನುವುದು ಒಂದು ಅಂಶ.

ಇವೆಲ್ಲಕ್ಕಿಂತ ಹೆಚ್ಚಾಗಿ, ನಮ್ಮ ದೊಡ್ಡ, ನಗರಗಳು, ಕಲ್ಕತ್ತಾ, ಬಾಂಬೆ, ಮದ್ರಾಸ್ಸ್, ಅಹಮದಾಬಾದ್, ಹೈದರಬಾದ್, ಬೆಂಗಳೂರು, ಕಾನ್‌ಪುರ, ಜಂಷೆಡ್‌ಪುರ, ರಾಂಚಿ, ಭಿಲ್ಯಾ, ದುರ್ಗಾಪುರ, ರೂರ್ಕೆಲಾಗಳಂತಹ ಕೈಗಾರಿಕೆ ಹಾಗೂ ವಾಣಿಜ್ಯ ಕೇಂದ್ರಗಳು ಬೆಳೆದಿವೆ, ಮತ್ತು ಬೆಳೆಯುತ್ತಿವೆ, ಇವು ಯಾವುದೇ ರಾಜ್ಯದ "ಮಣ್ಣಿನ ಮಕ್ಕಳ" ಉತ್ಪತ್ತಿಯಲ್ಲ ಭಾರತೀಯರೆಲ್ಲರ ಸಾಮೂಹಿಕ ದುಡಿಮೆಯ, ಒಟ್ಟು ಸಂಪನ್ಮೂಲಗಳ ಫಲಗಳು.

ಕಳೆದ ಮೂರುದಶಕಗಳಲ್ಲಿ ಅನೇಕ ದೊಡ್ಡ ಕೇಂದ್ರ ಕೈಗಾರಿಕೆಗಳು ಸ್ಥಾಪಿತವಾಗಿರುವ ಬೆಂಗಳೂರು ನಗರ, ಒಂದುಕಾಸ್ಮೋಪಾಲಿಟನ್ ನಗರ. ಕರ್ನಾಟಕದ ನೆಲದಲ್ಲಿಯೇ ಇದ್ದರೂ ಇಡೀ ಭಾರತದ, ಎಲ್ಲಾ ಭಾರತೀಯ ಪುತ್ರ, ಪುತ್ರಿಯರ, ತಂದೆ ತಾಯಂದಿರ ಸರ್ವಸಾಮಾನ್ಯ ಆಸ್ತಿ.

ನಮ್ಮ ದೇಶದಲ್ಲಿ ಈ ಭಾಷಾಂಧ ಶಕ್ತಿಗಳನ್ನು ಕಟ್ಟು ಹರಿದು ಬಿಚ್ಚಿ ಬಿಟ್ಟದ್ದು ಕಾಂಗ್ರೆಸ್ಸೇ ಎಂಬುದು ಎಲ್ಲರಿಗೂ ತಿಳಿದಿದೆ. ಮಹಾರಾಷ್ಟ್ರದ ಶಿವ ಸೇನೆಯ ಕನ್ನಡ ಮುಖವಾದ ಕನ್ನಡ ಚಳುವಳಿಗಾರರ ದೊಡ್ಡ ಬೆಂಬಲಿಗನಾದ ಗುಂಡೂರಾವ್‌ರವರ ಕುಪ್ರಸಿದ್ಧ ಉದಾಹರಣೆ ಕರ್ನಾಟಕದಲ್ಲಿಯೇ ಇದೆ. ಆದುದರಿಂದಲೇ, ಜನತಾ ನಾಯಕರಿಗೆ ಹಾಗೂ ಹೆಗ್ಗಡೆಯವರಿಗೆ ಬಾಂಬೆಯ ಶಿವಸೇನೆಯ ಹೆಜ್ಜೆಗಳಲ್ಲಿ ಹೆಜ್ಜೆಯಿಡಬೇಡಿ; ಅಥವಾ ಆಂಧ್ರದ ಜನರ ವಿರುದ್ಧ ತೆಲಂಗಾಣದ ಜನರನ್ನು ಎತ್ತಿ ಕಟ್ಟಿದ ಡಾ॥ ಚೆನ್ನಾರೆಡ್ಡಿಯವರ ಹಾದಿಯನ್ನು ತುಳಿಯಬೇಡಿ ಎಂದು ವಿನಂತಿಸುತ್ತೇವೆ.

ಕರ್ನಾಟಕದ ಸರಕಾರವನ್ನು, ಭಾಷಾಂಧತೆಯನ್ನು ಹರಿಯಬಿಡಬೇಡಿ, ಹರಿಬಿಟ್ಟು ಭಾರತದ ಸಮಗ್ರತೆ, ಐಕ್ಯತೆಯ ಹೆಸರಿನಲ್ಲಿ ರಾಜ್ಯಗಳ ಸ್ವಾಯತ್ತತೆಯನ್ನು ನಾಶಮಾಡುವ ಸರ್ವಾಧಿಕಾರಿ ಶಕ್ತಿಗಳ ಮಡಿಲಿಗೆ ಬೀಳಬೇಡಿ ಎಂದು ಒತ್ತಾಯಿಸುತ್ತೇವೆ.

ಪಿ. ಡಿ ಜುಲೈ 8, 1984

Printed & Published by P. Ramachandra Rao on behalf of the Commuaist Party of India [Marxist] Karnataka State Committe
K. V. Temple Stree, Sultanpet, Bangalore-560053
Sultanpet B-53 Phone : 75331
Editorial and Managerial Office : L-56, K. V. Temple Street.
Editor P. Ramachandra Rao
Managing Editor : N. K. Upadhyay